ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಜಿಲ್ಲೆಯ ಬಗ್ಗೆ ಏನೂ ಇಲ್ಲ? ನಮಗೆ ಎಲ್ಲಾ ಜಿಲ್ಲೆ ಷ್ಟೇ? ಅವರಿಗೆ ವಿಶೇಷವಾಗಿ ಜಿಲ್ಲೆ ಏಕೆಂದರೆ ಅವರು ಖಾಯಂ ಆಗಿ ಈಗಾಗಲೇ 30 ರ್ಷವಾಯಿತು, 1967 ರಿಂದ 1997 ರವರೆಗೆ ಇನ್ನೊಂದು 4-5 ತಿಂಗಳಲ್ಲಿ ಆಗುತ್ತದೆ.

ಉಪಾಧ್ಯಕ್ಷರು : ನೀವು ಸಿಲ್ವರ್ ಜ್ಯೂಬಿಲಿ ಮಾಡಿದಿರಲ್ಲಾ ಈಗ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನ್ನದು ಸಿಲ್ವರ್ ಜ್ಯೂಬಿಲಿ ಆಯಿತು. ಆದಕ್ಕಾಗಿ ನಾವು ಲ್ವರ್ ಜ್ಯೂಬಿಲಿ ಮಾಡುವಂತೆ ಇಲ್ಲ, ಗೋಲ್ಡನ್ ಜ್ಯೂಬಿಲಿ ಮಾಡುವಂತೆಯೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮಿತ್ರರಾದ ಖರ್ಗೆಯವರು ಆ ಕಡೆಯಿಂದ ಈ ಕಡೆಗೂ ಹೋಗಬಹುದು, ನಾನು ಯಾವತ್ತು ಇಲ್ಲೇ ಇರುತ್ತೇನೆ ಅದು ಸ್ಪಷ್ಟ.

ಉಪಾಧ್ಯಕ್ಷರು : ಆಗಲೇ ತಾವು ಮುಖ್ಯಮಂತ್ರಿಗಳಾಗುತ್ತೇನೆಂದು ಹೇಳಿದಿರಿ?

ಶ್ರೀ ಎಸ್. ಸುರೇಶ್ ಕುಮಾರ್ : ಶೂನ್ಯ ವೇಳೆಯಲ್ಲಿ ತುರ್ತಾದ ವಿಚಾರವನ್ನು ಪ್ರಸ್ತಾಪ ಾಡುವುದು ಇದೆ, ವಾಟಾಳ್ ನಾಗರಾಜರವರು ಮುಖ್ಯ ಮಂತ್ರಿಯಾಗುವುದು ತುರ್ತಾದ ವಿಚಾರವೆ?

ಶ್ರೀ ವಾಟಾಳ್ ನಾಗರಾಜ್ : ನಾನು ಮುಖ್ಯ ಮಂತ್ರಿಯಾಗುವುದು ಬಹಳ ಪ್ರಾಮುಖ್ಯವಾದಂಥ ಚಾರ ಮತ್ತು ಇದು ತುರ್ತು ಹೌದು?

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ೀದರ್‌ನಲ್ಲಿ ಜಿಲ್ಲಾ ಪರಿಷತ್ ಅಧ್ಯಕ್ಷರಾದ ಶ್ರೀ ಪ್ರಕಾಶ್ ಕಾಳೆ ಎಂಬುವರು ಖೋಟಾ ಿನ್ನಿ ನೋಟುಗಳನ್ನು ಮುದ್ರಿಸಿರುವುದಾಗಿ ವರದಿಯಾಗಿರುವ ವಿಚಾರ

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಅಧ್ಯಕ್ಷರೇ ಈಗ ನಾನು ಸ್ತಾಪ ಮಾಡತಕ್ಕಂಥ ವಿಷಯ ಏನೆಂದರೆ ಬೀದರ್‌ನಲ್ಲಿ ಒಬ್ಬ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಪ್ರಕಾಶ್ ಕಾಳೇಕರ್ ಎಂದು ಹೇಳಿ ಈ ಡೂಪ್ಲಿಕೇಟ್ ನೋಟನ್ನು (ಕರೆನ್ಸಿ ನೋಟನ್ನು) ಪ್ರಿಂಟ್ ಾಡಿದ್ದಾರೆ, ಮತ್ತು ನಾಸಿಕ್‌ದಿಂದ ಸಾಮಗ್ರಿಗಳನ್ನು ತಂದು ಮೆಶಿನ್‌ಗಳನ್ನು ತಂದು ಪ್ರಿಂಟ್‌ಮಾಡಿ, ಾವಣೆಯಲ್ಲಿ 50 ರೂಪಾಯಿ ನೋಟುಗಳನ್ನು ನಡೆಸತಕ್ಕಂಥ ಕೆಲಸ ಮಾಡಿದ್ದಾರೆ ಎಂದು ಹೇಳಿ ಾಗಲೇ ನಮಗೆ ಗೊತ್ತಾಗಿದೆ ಇದು ಪತ್ರಿಕೆಯಲ್ಲಿ ಕೂಡ ಬಂದಿದೆ. ಬೀದರ್‌ನಿಂದ ನನಗೆ ದೂರವಾಣಿ ಾಡಿ ಈ ವಿಷಯದ ಬಗ್ಗೆ ತಾವು ಕೇಳಬೇಕೆಂದು ನನಗೆ ಸಂಪರ್ಕ ಕೂಡ ಮಾಡಿದ್ದಾರೆ. ನಾನು ಕೂಡ ಇದನ್ನು ಕೊಟ್ಟಿದ್ದೆ, ಆ ಮನೆಯಲ್ಲಿ ಇದ್ದವರು ಇದನ್ನು ಪ್ರಸ್ತಾಪ ಮಾಡಿದರು ನನಗೆ ಇಲ್ಲಿ ಾವಕಾಶ ಸಿಗಲಿಲ್ಲ, ಏಕೆಂದರೆ ನಾವು ಡಿಬೆಟ್ ಮೇಲೆ ಡಿಸ್‌ಕಷನ್ ಮಾಡುವಾಗ ಇದು ಒಂದು ಿಟ್ ಮುಗಿಯಲಿ ಎಂದು ನಾನು ಕುಳಿತೆ, ಆದರೂ ಕೊನೆಯವರೆಗೂ ಅವಕಾಶ ಸಿಗಲಿಲ್ಲ. ತ್ತು ನಾನು ಅದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇದರಲ್ಲಿ ಮುಖ್ಯವಾದದ್ದು ಏನೆಂದರೆ ಒಬ್ಬ

ಜಿಲ್ಲಾ ಪಂಚಾಯತ್ ಅಧ್ಯಕ್ಷರಾಗಿ (ಆಡಳಿತ ಪಕ್ಷದಲ್ಲಿದ್ದವರು ಈಗ ಅವರ ಅವಧಿ ಮುಗಿದು ಎರಡು ತಿಂಗಳಾಯಿತು) ಈಗ ಒಂದು ಪಕ್ಷಕ್ಕೆ ಅಂದರೆ ಆಡಳಿತ ಪಕ್ಷಕ್ಕೆ ಸೇರಿದಂಥ ವ್ಯಕ್ತಿ ಅವನು ಈ ಕೇಸಿನಲ್ಲಿ ಇನ್‌ವಾಲ್ವ್ ಇದ್ದಾರೆ ಎಂದು ಎಲ್ಲರಿಗೂ ಗೊತ್ತಿದ್ದರೂ ಕೂಡ ಸದನ ಪ್ರಾರಂಭ ಆಗುವುದಕ್ಕೆ ಮುಂಚೆ ಸರ್ಕಾರದವರಿಗೂ ಈ ವಿಷಯ ಗೊತ್ತಿತ್ತು, ನಾವು ನೋಟೀಸ್ ಕೊಟ್ಟ ಮೇಲೆ, ಅವರು ಇಲ್ಲಿ ಇರಬೇಕಾಗುತ್ತದೆ, ಇಲ್ಲಿ ಗೃಹ ಮಂತ್ರಿಗಳು ಡಿ.ಜಿ.ಯವರು ಇರಬೇಕು. ಏಕೆಂದರೆ ಎಲ್ಲರಿಗೂ ಸಂಬಂಧಪಟ್ಟ ವಿಷಯವಾಗಿರುವುದರಿಂದ ಅವರು ಇರಬೇಕಾಗುತ್ತದೆ ನಾವು ಇನ್‌ವಿಟೇಷನ್ ಕೊಟ್ಟು ಕರೆದುಕೊಂಡು ಬರಬೇಕಾ ಹೇಗೆ?

ಉಪಾಧ್ಯಕ್ಷರು : ಗೃಹ ಮಂತ್ರಿಗಳನ್ನು ಕರೆದುಕೊಂಡು ಬರುವುದಕ್ಕೆ ಹೋಗಿದ್ದಾರೆ, ಅವರು ಬರುತ್ತಾರೆ, ತಾವು ಪ್ರಸ್ತಾಪ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಬರುವುದಕ್ಕೆ ಎರಡು ತಾಸು ಬೇಕೇ? ನಾವು ಒಂದು ಸಲ ರೈಜ್ ಮಾಡುತ್ತೇವೆ, ಇದಕ್ಕೆ ತಕ್ಷಣ ಉತ್ತರ ಕೊಡುವಂಥದ್ದು ಇರುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ವಿರೋಧ ಪಕ್ಷದ ನಾಯಕರು ಎತ್ತಿರತಕ್ಕಂಥ ವಿಚಾರದ ಬಗ್ಗೆ ಸರ್ಕಾರದ ಪರವಾಗಿ ನನ್ನ ಹೇಳಿಕೆಯನ್ನು ಬೇಕಾದರೆ ಮಾಡುತ್ತೇನೆ, ಅದು ಯಾವ ಹಂತದಲ್ಲಿ ಇದೆ, ಏನು ಇದೆ ನಾನು ತಿಳಿಸುತ್ತೇನೆ. ಅದು ಚರ್ಚೆಯಾಗಲಿ ಎನ್ನುವುದಾದರೆ ಚರ್ಚೆ ಪ್ರಾರಂಭವಾಗಲಿ ಅದಕ್ಕೂ ನಾವು ತಯಾರಿದ್ದೇವೆ.

ಉಪಾಧ್ಯಕ್ಷರು : ಅವರು ಅದರ ಬಗ್ಗೆ ಉತ್ತರ ತರಿಸಿಕೊಂಡಿದ್ದಾರೆ, ಅವರು ಹೇಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಅವರು ಸದನದಲ್ಲಿ ಮುಂಜಾನೆ ಹಾಜರಿದ್ದು ಈ ನೋಟೀಸ್ ಅವರ ಕೈಗೆ ತಲುಪಿದೆ ನೀವು ಇನ್‌ಫರ್ಮೇಷನ್ ಕೊಟ್ಟರೂ ಕೂಡ ಅವರು ಇಲ್ಲಿ ಇರುವುದಿಲ್ಲ, ಇಲ್ಲವೆಂದರೆ ಈ ಸದನಕ್ಕೆ ಅಗೌರವ ತರುತ್ತದೆ. ಇದು ಕೆಳಮನೆ ಮೇಲ್ಮನೆಯಲ್ಲಿ ಅವರು ಇಲ್ಲಿ. ಇಲ್ಲಿಗೆ ಅವರು ಬರಬೇಕೆಂದು ವಿಪ್‌ರವರಾದರೂ ಹೇಳಬೇಕು, ಇಲ್ಲಿ ಇಲ್ಲರೂ ಇರಬೇಕು, ಇಲ್ಲವಾದರೆ ನೀವು ಕೊನೆಗೆ ಛೀಮಾರಿಯಾದರೂ ಹಾಕಬೇಕು, ಇಂತಹದ್ದನ್ನು ನಾನು ಟಾಲರೇಟ್ ಮಾಡುವುದಿಲ್ಲವೆಂದು ಹೇಳಿ. ನೀವಾದರೂ ಹೇಳಿ ಈ ಪ್ರಕಾಶ್ ಕಾಳೇಕರ್ ಎನ್ನತಕ್ಕಂಥವರು ಈ ಒಂದು ಇನ್‌ಸಿಡೆಂಟ್‌ದಲ್ಲಿ ಈ ಒಂದು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು ಎನ್ನತಕ್ಕಂಥ ದಟ್ಟ ವದಂತಿ ಹಬ್ಬಿದೆ. ಪೊಲೀಸ್‌ನವರು ಈಗಾಗಲೇ ಎನ್‌ಕ್ವೈರಿ ಮಾಡಿ ಅದರ ಬಗ್ಗೆ ಅವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಹೋದಾಗ ಅವರು ನ್ಯಾಯಾಧೀಶರ ಮುಂದೆ ಸರಂಡರ್ ಮಾಡಿಕೊಂಡು ಬೇಲ್ ಮೇಲೆ ಬಂದಿದ್ದಾರೆ ಎನ್ನತಕ್ಕಂಥ ಸುದ್ದಿ ಬಂದಿದೆ ಈಗ ಅವರು ಬೇಲ್ ಮೇಲೆ ಹೊರಗಡೆ ಬರಬೇಕೆಂದರೆ ಪೋಲೀಸ್‌ನವರು ಅವರ ಮೇಲೆ ಯಾವ ಕೇಸ್‌ಗಳನ್ನು ಹಾಕಬೇಕಾಗಿತ್ತು ನಾನ್ ಬೇಲಬಲ್ ಆಫೆನ್ಸ್ ಮೇಲೆ ಆ ಕೇಸ್ ಹಾಕಿಲ್ಲ ಎನ್ನತಕ್ಕಂಥದ್ದು ಸ್ಪಷ್ಟವಾಗುತ್ತದೆ. ಅಥವಾ ಅವರು ಬೇಲ್ ಪಿಟೀಷನ್ ಮೂವ್ ಮಾಡುವಾಗ ಇವರು ಅದಕ್ಕೆ ವಿರುದ್ಧವಾಗಿ ಅಲ್ಲಿ

ಇವರ ಗೌರ್ನಮೆಂಟ್ ಪ್ರಾಸಿಕ್ಯೂಟರ್ ಆಗಲಿ ಅಥವಾ ಸರ್ಕಾರದ ಆದೇಶ ಅಲ್ಲಿ ಹೋಗಿಲ್ಲ ಇಂತಹ ಕೇಸಸ್ ಬಗ್ಗೆ ನೀವು ಸೀರಿಯಸ್ ಇರಬೇಕು ಏಕೆಂದರೆ,ಇದು ಬರೀ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಅಫೆನ್ಸ್ ಅಲ್ಲ. ನೀವು ಒಂದು ಜ್ಯುಡಿಸಿಯಲ್ ಕಾಪಿ ಇಶ್ಯೂನಲ್ಲಿ ರಿಸಿಗ್ನೇಷನ್ ತೆಗೆದುಕೊಂಡಿದ್ದೀರಿ, ಕೋಟ್ಯಾಂತರ ರೂಪಾಯಿ ಲಂಚ ಹೊಡೆದವರಿಗೆ ಇವತ್ತು ಬಿಡುತ್ತಿದ್ದೀರಿ. ಆದರೆ ಇವತ್ತು ಇಲ್ಲಿ ಖೋಟಾ ನೋಟುಗಳನ್ನು ತಯಾರು ಮಾಡಿ 50 ರೂಪಾಯಿ ಈ ಖೋಟಾ ನೋಟುಗಳಿಂದ ಲಕ್ಷಾಂತರದಿಂದ ಕೋಟ್ಯಾಂತರ ರೂಪಾಯಿಗಳನ್ನು ಹಂಚುವಾಗ ನೀವು ಇವತ್ತಿನ ದಿವಸ ಕಣ್ಣು ಮುಚ್ಚಿಕೊಂಡು, ಬಾಯಿ ಮುಚ್ಚಿಕೊಂಡು, ಕಿವಿ ಮುಚ್ಚಿಕೊಂಡು ಇವತ್ತಿನ ದಿವಸ ಕುಳಿತುಕೊಂಡಿದ್ದೀರಲ್ಲಾ ಏಕೆ? ಅಂದರೆ ಎಲ್ಲಾ ನಿಮಗೆ ಬೇಕು, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ. ಎಲ್ಲಿ ನಿಮಗೆ ಬೇಡ ಅವರ ಮೇಲೆ ಪ್ರಹಾರ ಮಾಡತಕ್ಕಂಥದ್ದು ಇದು ನಿಮ್ಮ ಗುಣವಾಗಿದೆ ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ಇವತ್ತು ಹೇಳಬೇಕಾಗುತ್ತದೆ. ಅದಕ್ಕೆ ತಾವು ತಕ್ಷಣ ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿದೆ. ಅಲ್ಲಿ ಮೆಶಿನ್ ಸಿಕ್ಕಿದೆ, 80 ಸಾವಿರ ರೂಪಾಯಿ ಕರೆನ್ಸಿ ನೋಟುಗಳು ಸಿಕ್ಕಿದೆ. ಆಮೇಲೆ ಕೆಲವು ನೋಟ್ ಬುಕ್‌ನಲ್ಲಿ ಡೂಪ್ಲಿಕೇಟ್ ನೋಟನ್ನು ಪ್ರಿಂಟ್ ಮಾಡುವುದಕ್ಕೆ ಏನು ಕಾಗದಗಳನ್ನು ತಂದಿದ್ದರೂ ನಾಸಿಕ್‌ದಿಂದ ಆ ಕಾಗದಗಳು ಕೂಡ ಸಿಕ್ಕಿವೆ. ಆ ಮೆಶಿನ್‌ನ್ನು ಯಾವ ಬಾವಿಯಲ್ಲಿ ಒಯ್ದು ಬಿಸಾಕಿದ್ದರು ಆ ಬಾವಿಯಿಂದ ಅದನ್ನು ತೆಗೆಯಬೇಕೆಂದರೆ ಅದಕ್ಕೂ ಕೂಡ ಪೊಲೀಸ್‌ರಿಗೆ ಕಷ್ಟವಾಯಿತು. ಒಂದೆರಡು ದಿವಸ ಸಾಕಷ್ಟು ವೇಟ್ ಮಾಡಿ ಕೊನೆಗೆ ತೆಗೆಯತಕ್ಕಂಥ ಒಂದು ಪ್ರಯತ್ನ ಮಾಡಿ ಈಗ ಅದರಲ್ಲಿ ಎವಿಡೆನ್ಸ್ ಯಾವರೀತಿ ತರಿಸುತ್ತಾರೋ ಗೊತ್ತಿಲ್ಲ. ಏಕೆಂದರೆ ಅವರನ್ನು ಈಗಾಗಲೇ ಬೇಲ್ ಮೇಲೆ ಬಿಡುಗಡೆ ಮಾಡಿದ್ದಾರೆ. ನ್ಯಾಚುರಲಿ ಇಡೀ ಜಿಲ್ಲೆಯಲ್ಲಿ ಅಡ್ಡಾಡಿ ಇವತ್ತಿನ ದಿವಸ ಎಲ್ಲೆಲ್ಲಿ ಯಾರ್ಯಾರು ಅಧಿಕಾರಿಗಳನ್ನು ಕಟ್ಟಿಕೊಳ್ಳಬೇಕು, ಯಾರ್ಯಾರ ಬಾಯಿ ಮುಚ್ಚಿಸಬೇಕು ಎನ್ನುವಂತಹ ಎಲ್ಲ ಕೆಲಸ ಮಾಡಿದ್ದಾರೆ. ಅದಕ್ಕೆ ನಾನು ಹೇಳಬೇಕಾಗುತ್ತದೆ ಸರ್ಕಾರ ಏನಾದರೂ ಇದನ್ನು ಮುಲಾಜಿನಲ್ಲಿ ನೋಡಿಕೊಳ್ಳಬೇಕಾದರೆ ಸರ್ಕಾರದ ಬೆಂಬಲ ಇದೆಯೇ? ಅಥವಾ ಅಲ್ಲಿರತಕ್ಕಂಥ ಮಂತ್ರಿಗಳು ಏನಾದರೂ ಬೆಂಬಲ ಕೊಡುತ್ತಿದ್ದಾರೆಯೇ? ಅಥವಾ ಸರ್ಕಾರಕ್ಕೆ ಗೊತ್ತಿದ್ದರೂ ಕೂಡ ಇದನ್ನು ಮರೆಮಾಚಿ ಎನ್ನತಕ್ಕಂಥ ಪ್ರಯತ್ನ ನಡೆದಿದೆ ಎನ್ನತಕ್ಕಂಥ ಪ್ರಶ್ನೆ ಇವತ್ತು ಉದ್ಭವಿಸುತ್ತದೆ. ಅದಕ್ಕೆ ಇದರ ಬಗ್ಗೆ ಈಗಾಗಲೇ ಆ ಸದನದಲ್ಲಿ ಸಿ.ಬಿ.ಐ. ಎನ್‌ಕ್ವಯರಿ ಮಾಡುತ್ತಾರೆಂದು ಹೇಳಿದ್ದಾರೆ. ಇನ್ನು ರೆಕ್‌ಮಂಡ್ ಮಾಡಿಲ್ಲ ಅದಕ್ಕಾಗಿ ಇದನ್ನು ಸಿ.ಬಿ.ಐ. ಎನ್‌ಕ್ವಯರಿ ಮಾಡಿಸಬೇಕು. ಮತ್ತು ಸಿ.ಬಿ.ಐ. ಎನ್‌ಕ್ವಯರಿ ಮುಗಿದಮೇಲೆ ಯಾವ್ಯಾವ ಅಧಿಕಾರಿಗಳು ಇದರಲ್ಲಿ ಇನ್‌ವಾಲ್ವ್ ಆಗಿದ್ದರು ಆ ಎಲ್ಲರನ್ನೂ ಕೂಡ ಜ್ಯುಡಿಷಿಯಲ್ ಕಸ್ಟಡಿಯಲ್ಲಿ ಇಡಬೇಕು, ಇಲ್ಲವೆಂದರೆ ಅದರಲ್ಲಿರುವ ಎಲ್ಲ ಎವಿಡೆನ್ಸ್ ಕೆಡಿಸಿಡುತ್ತಾರೆ, ಅದಕ್ಕೆ ದಯಮಾಡಿ ತಕ್ಷಣ ಸಂಬಂಧಪಟ್ಟ ಜಿಲ್ಲಾ ಪರಿಷತ್ತಿನ ಮಾಜಿ ಅಧ್ಯಕ್ಷರಿಗೆ ಅವರ ಸಂಗಡಿಗರಿಗೆ ಮತ್ತು ಇದು ಅಲ್ಲದೆ ಯಾವ ಪೋಲೀಸ್ ಅಧಿಕಾರಿಗಳು ಈ ಒಂದು ಕೇಸ್‌ನಲ್ಲಿ ಇನ್‌ವೆಸ್ಟಿಗೇಷನ್ ಮಾಡುವುದರಲ್ಲಿ ತಲೆ ಮಾಡಿದ್ದರೋ ಅಥವಾ ಕಣ್ಣು ಮುಚ್ಚಿಕೊಂಡಿದ್ದರೋ ಅವರ ಮೇಲೆ ಆ್ಯಕ್ಷನ್ ತೆಗೆದುಕೊಳ್ಳಬೇಕು. ಹೈದರಾಬಾದ್ ಪೊಲೀಸ್‌ನವರು ಬಂದು ಇದನ್ನು ಕಂಡುಹಿಡಿಯಬಹುದು, ಆದರೆ ಕರ್ನಾಟಕ

ಪೊಲೀಸ್‌ನವರು ಇದನ್ನು ಕಂಡು ಹಿಡಿಯುವುದಕ್ಕೆ ಆಗಲಿಲ್ಲ. ಅವರು ಯಾರೋ ಒಬ್ಬರು ಗೊತ್ತಿರುವಂತಹ ಮನುಷ್ಯ ಅಲ್ಲ, ಅಥವಾ ಯಾರೋ ಒಬ್ಬ ಅನ್ನೋನ್ ಪರ್ಸನ್ ಅಲ್ಲ., ಅಥವಾ ವೀರಪ್ಪನ್‌ನಂತೆ ಯಾವುದಾದರೂ ಕಾಡಿನಲ್ಲಿ ಹೋಗಿ ಮುಚ್ಚಿಕೊಂಡು ಕುಳಿತುಕೊಂಡಿದ್ದಾನೆ, ಅಲ್ಲಿ ಹೋಗಿ ನಮಗೆ ಹಿಡಿಯುವುದಕ್ಕೆ ಆಗಿಲ್ಲ ಎನ್ನುವಂತಹ ಪ್ರಶ್ನೆ ಅಲ್ಲ. ರಾಜಾರೋಷವಾಗಿ ತಿರುಗಾಡುವಂಥ ಮನುಷ್ಯ ಪಬ್ಲಿಕ್ ಆಗಿರತಕ್ಕಂಥ ನಿಮ್ಮ ಪಕ್ಷದ ಮನುಷ್ಯ, ಅಂತಹ ಮನುಷ್ಯನಿಗೆ ನೀವು ಹಿಡಿದು ಎನ್‌ಕ್ವಯರಿ ಮಾಡಿ ಆ ಜನರನ್ನು ಜ್ಯುಡಿಸಿಯಲ್ ಕಸ್ಟಡಿಯಲ್ಲಿ ಇಟ್ಟು ಯಾರು ತಪ್ಪಿತಸ್ಥರು ಅವರು ಕಂಡುಹಿಡಿಯುವುದಕ್ಕೆ ನಿಮ್ಮ ಪೋಲೀಸರಿಗೆ ಆಗಿಲಿಲ್ಲವೆಂದರೆ ನಾನು ಹೇಳಬೇಕಾಗುತ್ತದೆ The Police Department has utterly failed, the Home Department has utterly failed ಸುಮಾರು ಎರಡು ತಿಂಗಳಾಯಿತು ನ್ಯೂಸ್ ನಡೆದಿದೆ, ಎರಡು ತಿಂಗಳುಗಳಿಂದ ನ್ಯೂಸ್ ನಡೆದರೂ ಕೂಡ ಅದರ ಬಗ್ಗೆ ನೀವು ಕಾಳಜಿ ವಹಿಸದೆ ಸುಮ್ಮನೆ ಕುಳಿತುಕೊಂಡಿರಿ ಅಂದರೆ ಈ ಸರ್ಕಾರದವರೆ ಅಪ್ರತ್ಯಕ್ಷವಾಗಿ ಅದಕ್ಕೆ ಬೆಂಬಲ ಕೊಡುತ್ತಿದ್ದೀರಿ, ಅದಕ್ಕೆ ನೀವು ಚೆಕಪ್ ಮಾಡಿಸಬೇಕು ಉಪಾಧ್ಯಕ್ಷರೆ. ನಾನು ಮೊದಲೇ ಇದನ್ನು ಹೇಳಿದ್ದೇನೆ. ಇದನ್ನು ಬಹಳ ಲೈಟ್ ಆಗಿ ಹೇಳುತ್ತಿದ್ದೇನೆಂದು ತಿಳಿದುಕೊಳ್ಳಬಾರದು ನಾನು ಗಂಭೀರವಾಗಿ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು : ವಿಷಯವು ಗಂಭೀರವಾಗಿದೆ ತಾವು ಹೇಳುತ್ತಿರುವುದು ಕೂಡ ಗಂಭೀರವಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಂಥದ್ದರಲ್ಲಿ ಕನಿಷ್ಟ ಸಂಬಂಧಪಟ್ಟ ಮಂತ್ರಿಗಳಾದರೂ ಇರಬೇಕು ಯಾರು ಬೇಕಾದರೂ ಸರ್ಕಾರದ ಪರವಾಗಿ ಉತ್ತರ ಕೊಡಬಹುದೇ?

ಉಪಾಧ್ಯಕ್ಷರು : ಈಗ ಚೀಫ್‌ವಿಪ್‌ಮಂತ್ರಿಗಳನ್ನು ಕರೆಯಲಿಕ್ಕೆ ಕೌನ್ಸಿಲ್‌ಗೆ ಹೋಗಿದ್ದಾರೆ. ಮಂತ್ರಿಗಳು ಬಂದನಂತರ ಸರ್ಕಾರದ ಪರವಾಗಿ ಅವರು ಉತ್ತರ ಹೇಳುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಉತ್ತರ ಕೊಡತಕ್ಕಂತಹ ಪ್ರಶ್ನೆ ಬೇರೆ ಸರಕಾರದ ಉತ್ತರವನ್ನು ಯಾರು ಬೇಕಾದರೂ ಕೊಡಬಹುದು. ನ್ಯಾಯವಾಗಿ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಇರಬೇಕಾಗಿತ್ತು. ಅವರಿಗೆ ಅನಾರೋಗ್ಯ ಇದೆ ಒಪ್ಪಿಕೊಳ್ಳಬಹುದು. ಗೃಹಮಂತ್ರಿಯವರೂ ಹಾಜರಿಲ್ಲದಿದ್ದರೆ ಹೇಗೆ? ಇದು ಗೃಹ ಇಲಾಖೆಗೆ ಸಂಬಂಧಪಟ್ಟ ವಿಷಯ.

ಉಪಾಧ್ಯಕ್ಷರು : ಅವರು ಏನು ಮಾತನಾಡುತ್ತಿದ್ದಾರೆ ಸ್ವಲ್ಪ ಕೇಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇಂತಹ ವಿಚಾರಗಳು ಬಂದಾಗಲೆಲ್ಲ ಮಾನ್ಯ ಗೃಹ ಮಂತ್ರಿಗಳು ಇಲ್ಲಿ ಚರ್ಚೆ ಪ್ರಾರಂಭ ಮಾಡುವುದಕ್ಕೆ ಮೊದಲು ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಮೊದಲು ಈ ರೀತಿ ನಡೆದಿದೆ ಎಂದು ಹೇಳಿಕೆಯನ್ನು ಸದನಕ್ಕೆ ಕೊಡಬೇಕಾಗಿತ್ತು ನಾವು ಇಲ್ಲಿ ಹೇಳಿ ಆದಮೇಲೆ ಅವರನ್ನು ಉತ್ತರಹೇಳಿ ಎಂದು ಮಾಡತಕ್ಕಂಥಾದ್ದು ಇದು ಅನಾಗರೀಕವಾದ ಒಂದು

ಅವಿವೇಕದ ಪರಮಾವಧಿ. ಈ ಸದನಕ್ಕೆ ಮಾಡತಕ್ಕಂತಹ ಅಗೌರವ ಅದು. ಈ ಸದನದ ಹಕ್ಕುಚ್ಯುತಿಯಾಗುತ್ತದೆ. ಎಲ್ಲಕ್ಕೂ ನಾನು ಇದ್ದೇನೆಂದು ಮಾನ್ಯ ಸಿಂಧ್ಯರವರು ಎದ್ದು ನಿಂತರೆ ಪರಿಸ್ಥಿತಿ ಏನು? ಗೃಹ ಮಂತ್ರಿ ನಾನೇ, ಸಾರಿಗೆ ಮಂತ್ರಿ ನಾನೇ, ಮನೆ ಮಂತ್ರಿ, ಊಟದ ಮಂತ್ರಿ ತಿಂಡಿ ಮಂತ್ರಿ ನಾನೇ ಎಂದು ಅವರು ನಿಂತುಕೊಂಡರೆ ಇದಕ್ಕೇನಾದರೂ ಘನತೆ ಇದೆಯೇ? ಸಭೆಯ ಘನತೆ ಹೋಗುತ್ತಿದೆ. ಗೃಹ ಮಂತ್ರಿ ಎಲ್ಲಿ ಹೋಗಿದ್ದಾರೆ?

ಉಪಾಧ್ಯಕ್ಷರು : ಈಗಾಗಲೇ ವಿಪ್ ಅವರು ವಿಧಾನ ಪರಿಷತ್ತಿಗೆ ಹೋಗಿ ಮಂತ್ರಿಗಳಿಗೆ ತಿಳಿಸಿದ್ದಾರೆ. ಅವರು ಅಲ್ಲಿ ಗಮನ ಸೆಳೆಯುವ ಸೂಚನೆಗೆ ಉತ್ತರ ಕೊಡುತ್ತಿದ್ದಾರೆ ಬರುತ್ತಾರೆ ತಾವು ಸಹಕಾರ ಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮಗೆ ಬಂದಿರುವ ಸುದ್ದಿ ಪ್ರಕಾರ ಗೌರಿ ಬಿದನೂರಿನಲ್ಲಿ ಈ ರೀತಿ ಹಣ ಸಿಕ್ಕಿದೆ. ಇಡೀ ರಾಜ್ಯದಲ್ಲಿ ಈ ಜಾಲ ವಿಸ್ತರಣೆಯಾಗಿದೆ. ಖೋಟಾ ನೋಟಿನ ಜಾಲ ಇಡೀ ರಾಜ್ಯದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನಡೆದರೆ ಅಮಾಯಕರು ಯಾರು ಆ ನೋಟನ್ನು ಉಪಯೋಗಿಸುತ್ತಿದ್ದಾರೆ ಅವರ ಗತಿ ಏನಾಗುತ್ತದೆ? ಹಿಂದೆ ಬೀದರ್‌ನಲ್ಲಿ ಕೆ.ಎಸ್.ಆರ್.ಟಿ.ಸಿ. ಖೋಟಾ ಟಿಕೆಟ್ ಅಲ್ಲಿಯೇ ಸಿಕ್ಕಿದ್ದು ಅದು ತಮಗೂ ಗೊತ್ತಿದೆ. ಬೀದರ್‌ನಲ್ಲೇ ಖೋಟಾ ನೋಟು ಪ್ರಿಂಟ್ ಆಗುತ್ತಿದೆ. ಪೋಲೀಸಿನವರು ಶಾಮೀಲಾಗಿದ್ದಾರೆಂಬ ಸುದ್ದಿ ಇದೆ. ಮಹಾರಾಷ್ಟ್ರದಲ್ಲಿರುವವರನ್ನು ಬಂಧನ ಮಾಡಿದ್ದಾರೆ ಕರ್ನಾಟಕದಲ್ಲಿರುವವರನ್ನು ಬಂಧನ ಮಾಡಿಲ್ಲ. ಸರಕಾರ ಈ ರೀತಿ ನಡೆದುಕೊಂಡು ಹೋದರೆ ಜನ ಏನು ಮಾಡಬೇಕು? ಖೋಟಾ ನೋಟು ಯಾವುದು ಸಾಚಾ ನೋಟು ಯಾವುದು ಎಂದು ನಮಗೆ ಅನುಮಾನ. ಹೇಳುವವರು ಕೇಳುವವರು ಇದ್ದಾರಾ? ಮಾಜಿ ಜಿಲ್ಲಾ ಪರಿಷತ್ ಅಧ್ಯಕ್ಷರನ್ನು ಇಲ್ಲಿಯವರೆಗೆ ಏಕೆ ಬಂಧನ ಮಾಡಿಲ್ಲ? ಲೇಟೆಸ್ಟ್ ಪೊಸಿಷನ್ ಏನು ಎಂದು ಹೇಳಬೇಕು.

(ಗೊಂದಲ)

ನಾವು ಸಿಂಧ್ಯರವರ ಉತ್ತರ ಕೇಳುವುದಿಲ್ಲ ಅವರ ಹತ್ತಿರವೇನು ಮಾಹಿತಿ ಇದೆ.

(ಗೊಂದಲ)

ಉಪಾಧ್ಯಕ್ಷರು : ಅವರು ಹೇಳುವುದನ್ನು ಕೇಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಗೃಹ ಮಂತ್ರಿಗಳಿಲ್ಲಿದ್ದಾರೆ ಮೊದಲು ಅವರನ್ನು ಹುಡುಕಿಸಿ. ಅವರ ಸರಕಾರದ ನೀತಿ ಏನು ಎಂದು ತಿಳಿಯಬೇಕು. ಗೃಹ ಮಂತ್ರಿಗಳು ತಮ್ಮ ಇಲಾಖೆಯಲ್ಲಿ ಯಾವ ಕ್ರಮ ತೆಗೆದುಕೊಂಡಿದ್ದಾರೆ ತಿಳಿಸಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಲೇಟೆಸ್ಟ್ ಪೊಸಿಷನ್ ಏನು? ಎಷ್ಟು ಕೋಟಿ ಹಣ ಸಿಕ್ಕಿದೆ ವಿವರ ಬೇಕು.

(ಗೊಂದಲ)

ಉಪಾಧ್ಯಕ್ಷರು : 7-8 ಜನ ಶೂನ್ಯವೇಳೆಯಲ್ಲಿ ನಿಂತು ಮಾತನಾಡುವುದಕ್ಕೆ ಅವಕಾಶ ಇದೆಯೇ?

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಿಂಧ್ಯರವರು ನಾನು ಗೃಹಸಚಿವನಾಗಿದ್ದಾಗ ಕೂಡ ಖೋಟಾ ನೋಟು ಆಗುತ್ತಿತ್ತು ಎಂದು ಹೇಳಿದರು. ನಾನು ಉತ್ತರ ಕೊಡುತ್ತೇನೆಂದು ಹೇಳುತ್ತಿದ್ದಾರೆ.

ಉಪಾಧ್ಯಕ್ಷರು : ಇಷ್ಟು ಜನ ನಿಂತು ಶೂನ್ಯವೇಳೆಯಲ್ಲಿ ಮಾತನಾಡುವುದಕ್ಕೆ ಅವಕಾಶ ಇದೆಯೇ? ತಾವು ಹಿರಿಯ ಸದಸ್ಯರು ಇದ್ದೀರಿ ಸಾಕಷ್ಟು ಅನುಭವ ಇದ್ದವರು. ಈ ರೀತಿ ಮಾಡಿದರೆ ಹೇಗೆ ಸರಕಾರದ ಪರವಾಗಿ ಅವರೇನು ಹೇಳುತ್ತಾರೆ ಕೇಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಿನ್ನೆ ಯಾರ್ಯಾರನ್ನು ಬಂಧನ ಮಾಡಿದ್ದಾರೆ ಕೇಳಿ.

(ಗೊಂದಲ)

ಉಪಾಧ್ಯಕ್ಷರು : ಶೂನ್ಯ ವೇಳೆಯನ್ನು ಸದಸ್ಯರು ಸರಿಯಾಗಿ ಉಪಯೋಗ ಮಾಡಲಿಲ್ಲವೆಂದರೆ ಅದನ್ನು ರದ್ದು ಮಾಡುತ್ತೇವೆಂದು ಮಾನ್ಯ ಅಧ್ಯಕ್ಷರು ನಿನ್ನೆ ಹೇಳಿದ್ದಾರೆ. ಸಮಯವನ್ನು ಸರಿಯಾಗಿ ಉಪಯೋಗ ಮಾಡಿ ಎಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಶೂನ್ಯವೇಳೆಯನ್ನು ರದ್ದು ಮಾಡೋಣ. ಚರ್ಚೆಯನ್ನು ರದ್ದು ಮಾಡೋಣ. ಈ ರೀತಿ ಉತ್ತರ ಕೊಟ್ಟರೆ ಗೃಹ ಮಂತ್ರಿಗಳ ಬದಲಿಗೆ ಬೇಕಾಬಿಟ್ಟಿ ಯಾರ್ಯಾರೋ ಉತ್ತರ ಕೊಡುತ್ತಾರೆಂದಾದರೆ, ಜಂಟಿ ಜವಾಬ್ದಾರಿ ಇದೆ ಅದು ನನಗೂ ಗೊತ್ತಿದೆ. ಆದರೆ ಇಂತಹ ಸೂಕ್ಷ್ಮವಾದ ವಿಷಯಗಳಲ್ಲಿ ಈ ರೀತಿ ಮಾಡುವುದು ಸರಿಯಲ್ಲ. ಇಂತಹ ಪರಿಸ್ಥಿತಿಯಲ್ಲಿ ಮಾನ್ಯ ಸಿಂಧ್ಯರವರು ಉತ್ತರ ಕೊಡುತ್ತೇವೆಂದು ಹೇಳಿದರೆ ಏನು ಹೇಳಬೇಕು. ಈ ರೀತಿ ಕಾರ್ಯಕಲಾಪವನ್ನು ನಡೆಸುವುದು ಸರಿಯಲ್ಲ.

(ಗೊಂದಲ)

ಉಪಾಧ್ಯಕ್ಷರು : 7-8 ಜನ ಎದ್ದು ನಿಂತರೆ ತಾವು ಪ್ರಸ್ತಾಪ ಮಾಡುವುದು ಹೇಗೆ? ಸರಕಾರದ ಪರವಾಗಿ ಅವರು ಹೇಳುವುದನ್ನು ಕೇಳುವಷ್ಟು ಸೌಜನ್ಯ ಇಲ್ಲವೆಂದರೆ ಹೇಗೆ? ತಾವು ಅರ್ಥ

ಮಾಡಿಕೊಳ್ಳಬೇಕು. ಅವರು ಹೇಳುವುದನ್ನು ನೀವು ಕೇಳಬೇಕು ಇಲ್ಲಿ ನೀವು ಹೇಳುವುದನ್ನು ಅವರೂ ಕೇಳಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸಿ.ಬಿ.ಐ.ಗೆ ವಹಿಸುತ್ತೇವೆಂದು ಹೇಳಿದ್ದಾರೆ. ಯಾರ್ಯಾರನ್ನು ಹಿಡಿದಿದ್ದಾರೆಂದು ತಿಳಿಯಬೇಕಾಗುತ್ತದೆ.

(ಗೊಂದಲ)

ಉಪಾಧ್ಯಕ್ಷರು : ಸಿ.ಬಿ.ಐ.ಗೆ ವಹಿಸುವುದು ಸರಕಾರದ ಕೆಲಸ. ಸರಕಾರದ ಪರವಾಗಿ ಹೇಳಿಕೆ ಕೊಡುತ್ತಾರೆ ತಾವು ಕೇಳಿ.

ಶ್ರೀ ವಾಟಾಳ್ ನಾಗರಾಜ್ : ಅವರು ಹೇಳಿಕೆ ಕೊಡುವುದನ್ನು ನಾವು ಖಂಡಿತ ಬೇಡವೆಂದು ಹೇಳುವುದಿಲ್ಲ. ಗೃಹಮಂತ್ರಿಗಳ ಹೇಳಿಕೆಯನ್ನು ಸಾರಿಗೆ ಮಂತ್ರಿ ಹೇಳುವುದು, ಸಾರಿಗೆ ಮಂತ್ರಿ ಹೇಳಿಕೆಯನ್ನು ಉನ್ನತ ಶಿಕ್ಷಣದವರು ಹೇಳುವುದು, ಉನ್ನತ ಶಿಕ್ಷಣ ಇಲಾಖೆಯ ಬಗ್ಗೆ ಸಮಾಜ ಕಲ್ಯಾಣ ಇಲಾಖಾ ಮಂತ್ರಿ ಹೇಳುವುದು ಸರಿಯಲ್ಲ.

(ಗೊಂದಲ)

ಉಪಾಧ್ಯಕ್ಷರು : ಅವರು ಮೇಲ್ಮನೆಯಲ್ಲಿ ಇದ್ದಾರೆ. ಚೀಫ್‌ವಿಪ್ ಕಡೆ ಹೇಳಿ ಕಳಿಸಿದ್ದೇವೆ ತಾವು ಸಹಕಾರ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಹೇಳುವಾಗಲೇ ಅವರು ನಿಂತರು ನನ್ನದು ಪೂರ್ತಿಯಾಗಬೇಕಲ್ಲ.

(ಗೊಂದಲ)

ಶ್ರೀ ಸಯದ್ ಜುಲ್‌ಫಿಕರ್ ಹಷ್ಮಿ : ನನ್ನ ಹತ್ತಿರ ಮಾಹಿತಿ ಇದೆ ನನಗೆ ಅವಕಾಶ ಮಾಡಿಕೊಡ ಬೇಕು. ಇದು ನನ್ನ ಕ್ಷೇತ್ರದ ತೊಂದರೆ.

(ಗೊಂದಲ)

ಉಪಾಧ್ಯಕ್ಷರು : ತಾವು ದಯವಿಟ್ಟು ಕುಳಿತುಕೊಳ್ಳಬೇಕು. ತಮಗೆ ಅವಕಾಶವಿಲ್ಲವೆಂದು ನಾನು ಹೇಳಿದ್ದೇನೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಇಲ್ಲಿ ಎರಡು ವಿಚಾರಗಳು ಇವೆ ಸರಕಾರ ಇಲ್ಲಿ ಮುಚ್ಚಿಡುವುದು ಏನೂ ಇಲ್ಲ. ಈ ವಿಚಾರದಲ್ಲಿ ಸರಕಾರ ಮುಚ್ಚಿಡತಕ್ಕಂಥಾದ್ದಾಗಲೀ ಯಾರನ್ನೋ ಡಿಫೆಂಡ್ ಮಾಡಿಕೊಳ್ಳುವ ಪ್ರಶ್ನೆ ಇಲ್ಲವೇ ಇಲ್ಲ. ಈಗಾಗಲೇ ನಾವು ಸಿ.ಬಿ.ಐ. ವಿಚಾರಣೆಗೆ ಒಪ್ಪಿದ್ದೇವೆ.

ಇದರ ಬಗ್ಗೆ ಸದನ ನಡೆಯುವಾಗ ಚರ್ಚೆ ಮಾಡಬೇಕು. ಗೌರಿಬಿದನೂರಿನಲ್ಲಿ ಆಗಿದೆ ಎಂದು ಹೇಳಿದ್ದಾರೆ. ನಾವು ಮಂತ್ರಿಮಂಡಲದ ನಮ್ಮ ಸಹೋದ್ಯೋಗಿಗಳಿಗೆ ನಮ್ಮ ಜಿಲ್ಲೆಗಳಲ್ಲಿ ಏನು ನಡೆಯುತ್ತದೆ ಎಂದು ಗೊತ್ತಾಗುತ್ತದೆ ನಾವೂ ಚರ್ಚೆ ಮಾಡುತ್ತೇವೆ. ಇದನ್ನು ಯಾವುದೇ ಪಕ್ಷದವರು ಮಾಡಿರಲಿ ಸಮಾಜದ್ರೋಹದ ರಾಷ್ಟ್ರದ್ರೋಹದ ಕೆಲಸ. ಯಾವುದೇ ಪಕ್ಷದವರು ಮಾಡಿದ್ದರೂ ತಪ್ಪು. ಇದರಲ್ಲಿ ಮುಚ್ಚಿಡತಕ್ಕಂಥಾದ್ದು ಏನೂ ಇಲ್ಲ, ಚರ್ಚೆಯಾಗಲಿ. ಇದು ಶೂನ್ಯವೇಳೆಯಲ್ಲಿ ವಿರೋಧ ಪಕ್ಷದ ನಾಯಕರು ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ವಿರೋಧ ಪಕ್ಷದ ನಾಯಕರು, ಸಭಾ ನಾಯಕರು ಮಾತನಾಡುವಾಗ ಸಮಯವನ್ನು ನಾವು ನಿಗದಿಗೊಳಿಸಲಿಕ್ಕೆ ಹೋಗುವುದಿಲ್ಲ. ಆ ಸಮಯದ ಪ್ರಜ್ಞೆಯನ್ನು ಇಟ್ಟು ಕೊಂಡು ಕಾರ್ಯ ನಿರ್ವಹಿಸುತ್ತಿದ್ದಾರೆ. ಸರಕಾರ ಒಪ್ಪಿದೆ. We have agreed for CBI enquiry, we are prepared to do anything on this issue. ಇದನ್ನು ಡಿಬೆಟ್ ಮಾಡಬೇಕೆಂದು ಹೇಳುವುದಾದರೆ ಶೂನ್ಯವೇಳೆಯಲ್ಲಿ ಡಿಬೇಟ್ ಮಾಡುವುದಕ್ಕಾಗುವುದಿಲ್ಲ. ಮಂತ್ರಿಗಳ, ಜಿಲ್ಲಾ ಮಂತ್ರಿಗಳ ಸಪೋರ್ಟ್ ಇದಕ್ಕೆ ಇದೆಯಾ ಎಂದು ಹೇಳಿದರು. ನಿಮ್ಮ ಪಾರ್ಟಿಯವರು ಎಂದು ಹೇಳಿದರು. ಇದನ್ನೆಲ್ಲಾ ಅಲ್ಲಗೆಳೆಯಬೇಕಾಗುತ್ತದೆ. ಇದು ಸಮಾಜ, ರಾಷ್ಟ್ರದ್ರೋಹದ ಕೆಲಸ ಇಂತಹವರಿಗೆ ನಾವ್ಯಾಕೆ ರಕ್ಷಣೆ ಕೊಡುತ್ತೇವೆ? ರಕ್ಷಣೆ ಕೊಡುವವರು ಯಾರೂ ಇಲ್ಲ. ಬೇರೆ ಸಮಯವನ್ನು ಇದಕ್ಕೆ ನಿಗದಿಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಚರ್ಚೆಗೆ ಹೋಗುವುದಿಲ್ಲ. ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. 2 ನಿಮಿಷದಲ್ಲಿ ಮುಗಿಸುತ್ತೇನೆ. ಸಂಬಂಧಪಟ್ಟ ಮಂತ್ರಿಗಳು ಈಗ ಬಂದಿದ್ದಾರೆ. ಮಾನ್ಯ ಬೇಗ್ ಅವರೇ ಹೇಳಿದ್ದಾರೆ.

3.40 ಪಿ.ಎಂ

"Mr. Roshan Baig maintained that there was no quuestion of protecting the accused even if they belonged to ruling party. He said, Prakash Kalekar had voluntarily surrendered before the Magistrate and Police seized fake currency worth Rs. 80,000/- Meanwhile, Nasik Police arrested four persons involved in the case." ನಾನು ಹೇಳುವುದು ಏನೆಂದರೆ ಸಿಬಿಐ ನವರು ಯಾರು ಮಾಡುತ್ತಿದ್ದಾರೆ, ಅದರ ಬಗ್ಗೆ ಡೀಟೈಲ್ ಎನ್‌ಕ್ವೈರಿ ನಡೆಯಲಿ, ಅದು ನಡೆಯುತ್ತದೆ, ಅವರು ಒಪ್ಪಿಕೊಂಡಿದ್ದಾರೋ ಇನ್ನೂ ರೆಫರ್ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ನಾವು ಮಾಡುವುದಕ್ಕೆ There is no hesitation to refer it to CBI ಎಂದು ಹೇಳಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, The Government has agreed. We will recommend accordingly.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ನಾನು ಕೇಳುವ ಪ್ರಶ್ನೆ ಇಷ್ಟೆ ನಾಸಿಕ್ ಪೋಲೀಸ್‌ನವರು ಬಂದು ಇಲ್ಲಿ ಅರೆಸ್ಟ್ ಮಾಡಬಹುದು, ನಾಸಿಕ್‌ನಿಂದ ಮೆಷಿನ್‌ಗಳನ್ನು ತರಬಹುದು, ನಾಸಿಕ್‌ನಿಂದ

ಪೇಪರ್ ತರಬಹುದು, ಅದು ತಂದು ಬೀದರ್‌ನಲ್ಲಿ ಪ್ರಿಂಟ್ ಮಾಡಬಹುದು, ಅದಾದಮೇಲೆ ಪೋಲೀಸರು ಎಲ್ಲಾ ಬರುತ್ತಿದ್ದಾರೆ ಎಂದು ತಿಳಿದುಕೊಂಡು ಸುದ್ದಿ ಸುಳಿವು ಸಿಕ್ಕಮೇಲೆ ಅದನ್ನು ಒಯ್ದು ಬಾವಿಯಲ್ಲಿ ಬಿಸಾಕಬಹುದು, ಇಷ್ಟೆಲ್ಲಾ ನಡೆಯುವತನಕ ನಮ್ಮ ಪೋಲೀಸರು ಏನು ಮಾಡುತ್ತಿದ್ದರು? ನಮ್ಮ ಗೃಹ ಇಲಾಖೆ ಏನು ಮಾಡುತ್ತಿತ್ತು? ಅದಕ್ಕೆ ಇವತ್ತಿನ ದಿವಸ ಎಲ್ಲಾ ಕಾಲದಲ್ಲಿ ನಡೆದಿದೆ ಎಂದು ಕೇಳುವುದು ಬೇಡವೇ? ಅದಕ್ಕೆ ಎಲ್ಲಾ ಕಾಲದಲ್ಲಿ ನಡೆದಿದೆ ಎಂದರೆ ನೀವು ಆಗ ಕೇಳಿಯೇ ಕೇಳಿರಬೇಕು. ನಾವು ಉತ್ತರ ಕೊಟ್ಟಿರಬೇಕು. ಆದರೆ ನಾನು ಹೇಳುತ್ತೇನೆ. ನೀವು ಇಷ್ಟೊಂದು ಸಮೀಪದ ಮನುಷ್ಯ ಯಾರೋ ಒಬ್ಬ ಮನುಷ್ಯನಿಗೆ ಒಬ್ಬ ಯಾರಿಗೂ ಗೊತ್ತಿಲ್ಲ, ಪರಿಚಯ ಇಲ್ಲ ಅಥವಾ ನಾನು ಈಗಾಗಲೇ ಹೇಳಿದಂತೆ ವೀರಪ್ಪನ್‌ನಂತೆ ಕಾಡಿನಲ್ಲಿ ಅಡಿಗಿಕೊಂಡು ಕುಳಿತಿದ್ದಾರೆ, ನಿಮಗೆ ಅಲ್ಲಿಗೆ ಹೋಗುವುದಕ್ಕೆ ಆಕ್ಸೆಸ್ ಇಲ್ಲ ಎಂದಿದ್ದರೆ ನಾನು ಹೇಳಬಹುದು, ಹೌದಪ್ಪ, ಬಹಳ ಡಿಫಿಕಲ್ಟ್ ಆಂತ ಯಾವ ರೀತಿಯಾಗಿ ಎಸ್‌ಟಿಎಫ್ (ಸ್ಪೆಷಲ್ ಪೋಲೀಸರು) ಅವರಿಗೆ ಹಿಡಿಯಲಿಕ್ಕೆ ಯಾವ ರೀತಿಯಾಗಿ ತೊಂದರೆಯಾಯಿತು, ಹಾಗೆಯೇ ಇವರಿಗೂ ತೊಂದರೆಯಾಗಿದೆ ಎಂದು ಹೇಳಬಹುದು. ಆದರೆ ನಿಮ್ಮ ಜೊತೆಯಲ್ಲಿರುವ ಮನುಷ್ಯ, ಅಡ್ಡಾಡುವ ಮನುಷ್ಯ, ಡೆಪ್ಯುಟಿ ಕಮೀಷನರ್‌ಗೆ ಗೊತ್ತು, ಎಸ್.ಪಿ.ಗೆ ಗೊತ್ತು. ಸರ್ಕಲ್ ಇನ್ಸ್‌ಪೆಕ್ಟರ್‌ಗೆ ಗೊತ್ತು. ಎಲ್ಲಾ ಅಧಿಕಾರಿಗಳಿಗೂ ಗೊತ್ತು. ಇಷ್ಟೆಲ್ಲಾ ಜನರಿಗೆ ಗೊತ್ತಿದ್ದರೂ ಇಂಥದ್ದು ಮುಚ್ಚಿಡುವ ಅವಶ್ಯಕತೆ ಏನು ಬಂತು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸಿಬಿಐ ಒಪ್ಪಿಕೊಂಡಮೇಲೂ ಮತ್ತೆ ಈ ರೀತಿ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಿಬಿಐಗೆ ಇವತ್ತು ಬಂತು ಅಂದರೆ ಎಕೆ ಇಷ್ಟು ದಿವಸ?

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನೀವು ಮಾಡಿದ್ದೀರಿ ಎಂದು ಹೇಳಿಬಿಡುತ್ತೀರಾ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಯಾರ ಹೆಸರನ್ನು ಹೇಳಲಿಲ್ಲವಲ್ಲ. ಹೆಸರು ಹೇಳುವುದು ಈಗ ಬೇಡ. ಇದು ಒಂದು ಇನ್‌ಸಿಡೆಂಟ್ ಇವತ್ತು ನಮ್ಮ ನಜರಿಗೆ ಬಂದಿದೆ ಅಥವಾ ನಮಗೆ ಗೊತ್ತಾಗಿದೆ. ಈಗಾಗಲೇ ಯಡಿಯೂರಪ್ಪನವರು ಹೇಳಿದಂತೆ ಗೌರಿಬಿದನೂರಿನಲ್ಲಿ ಇರಬಹುದು. ಖೋಟಾ ನೋಟುಗಳಲ್ಲಿ ಕೊಯಮತ್ತೂರು ನೋಟು ಯಾವಾಗಲೂ ತಮಗೆ ಗೊತ್ತಿರುವಂತೆ. ಹೆಸರುವಾಸಿ.

ಉಪಾಧ್ಯಕ್ಷರು : ಬೇರೆ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ನಿಮಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಚರ್ಚೆ ಮಾಡುವುದಕ್ಕಿಂತಲೂ ಸಾಮಾನ್ಯವಾಗಿ ಪ್ರಾಜೆಕ್ಟ್ ಏರಿಯಾದಲ್ಲಿ ಲೇಬರ್ ಎಲ್ಲಿ ಹೆಚ್ಚಿಗೆ ಇರುತ್ತಾರೋ ಎಲ್ಲಿ ಕೆಲಸಗಳು ನಡೆಯುತ್ತದೋ ಅಂಥ ಕಡೆ

ಫೇಕ್ ನೋಟ್ಸ್‌ನ್ನು ಯೂಸ್ ಮಾಡುತ್ತಾರೆ. ಹಿಂದೆ ಕೂಡ ಯುಕೆಪಿಯಲ್ಲಿ, ಹೇಮಾವತಿ, ಹಾರಂಗಿಯಲ್ಲಿ ಪೇಮೆಂಟ್ ಮಾಡುವಾಗ ಇದನ್ನು ಉಪಯೋಗ ಮಾಡಿದ್ದಾರೆ ಎನ್ನುವ ಅಲಿಗೇಷನ್ ಕೂಡ ಇದೆ. ಆದ್ದರಿಂದ ಇದರ ಬಗ್ಗೆ ಸಮಗ್ರವಾದ ತನಿಖೆಯಾಗಬೇಕು. ಈ ಒಂದು ಇನ್‌ಸಿಡೆಂಟ್ ಬಗ್ಗೆ ಲಿಮಿಟೆಡ್ ಆಗಿ ಬೀದರ್ ಇದ್ದರೂ ಕೂಡ ಉಳಿದ ಎಲ್ಲಾ ಜಿಲ್ಲೆಗಳಲ್ಲಿ ಬಾರ್ಡರ್‌ಗಳಲ್ಲಿ ವಿಚಾರಮಾಡಬೇಕು.

(ಗೊಂದಲ)

ಶ್ರೀ ಪಿ.ಜಿ. ಆರ್. ಸಿಂದ್ಯಾ : ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಶೂನ್ಯ ವೇಳೆಯಲ್ಲಿ ಇಷ್ಟೊಂದು ಅವಕಾಶ ಕೊಟ್ಟರೆ ಹೇಗೆ?

(ಗೊಂದಲ)

ಉಪಾಧ್ಯಕ್ಷರು : ಅವರು ಉತ್ತರ ಹೇಳುತ್ತಾರೆ. ತಾವು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎರಡೇ ನಿಮಿಷ.

ಉಪಾಧ್ಯಕ್ಷರು : ಎರಡು ನಿಮಿಷ ಎಂದು ಹೇಳಿ ಇಷ್ಟೊತ್ತು ತೆಗೆದುಕೊಂಡಿದ್ದೀರಿ. ಬೇಗ ಮುಗಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ಬಾರ್ಡರ್ ಏರಿಯಾದಲ್ಲಿ ಪರ್ಪಿಕ್ಯುಲರ್ಲಿ ಬೀದರ್ ಬಾರ್ಡರ್ ಏರಿಯಾ, ಕೋಲಾರ ಬಾರ್ಡರ್ ಏರಿಯಾ, ಈ ಬಾರ್ಡರ್ ಏರಿಯಾದಲ್ಲಿ ಬೆಳಗಾಂ ಇರಬಹುದು, ಬಿಜಾಪುರ ಇರಬಹುದು, ಈ ಕಡೆ ಕೊಳ್ಳೇಗಾಲ ಇರಬಹುದು, ನಮ್ಮ ಚಾಮರಾಜನಗರ ಜಿಲ್ಲೆಯಾಗಿದೆ, ಬೆಂಗಳೂರಿನಲ್ಲೂ ಏನಾಗಿದೆ. ಇವತ್ತಿನ ದಿವಸ ಈ ಬೆಂಗಳೂರಿನಲ್ಲಿ ಅಂಡರ್‌ಗ್ರೌಂಡ್ ವರ್ಲ್ಡ್‌ನವರು ವಿಶೇಷವಾಗಿ ಬಾಂಬೆಯವರು ಸಾಕಷ್ಟು ಗೂಂಡಾಗಳು, ಆ್ಯಂಟಿ ಸೋಷಿಯಲ್ ಎಲಿಮೆಂಟ್ಸ್, ಈ ಎಲ್ಲಾ ಎಲಿಮೆಂಟ್ಸ್ ಬೆಂಗಳೂರಿನಲ್ಲಿ ಬರುತ್ತಿದ್ದಾರೆ. ಅವರ ಪ್ರೋತ್ಸಾಹ ಕೂಡ ಇಂಥ ಕೆಲಸಕ್ಕೆ ಇರುತ್ತದೆ. ಅದಕ್ಕಾಗಿ ಇದರ ಬಗ್ಗೆ ಬಿಗಿ ಬಂದೋಬಸ್ತ್ ಪೋಲೀಸರು ಮಾಡಿಕೊಳ್ಳದಿದ್ದರೆ ಸರಿಯಾಗುವುದಿಲ್ಲ. ದಯವಿಟ್ಟು ಸಿಬಿಐ ಗೆ ನಾವು ಕಳುಹಿಸುತ್ತೇವೆ ಎಂದು ಹೇಳಿ ಖಡಾಖಂಡಿತವಾಗಿ ಹೇಳಬೇಕು. ನಾವು ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಂಡಿದ್ದೇವೆ, ಬರೆದಿದ್ದೇವೆ ಎಂದು ಹೇಳಿದರೆ ತಾವು ಇವತ್ತು ಬರೆದಿದ್ದೀರಾ? ಏಕೆಂದರೆ ನಿನ್ನೆ ಒಪ್ಪಿಗೆ ಕೊಟ್ಟಿದ್ದೀರಿ. ನಿನ್ನೆ ಸಾಯಂಕಾಲ ಸಿಬಿಐಗೆ ಬರೆದಿದ್ದೀರಾ? ಮತ್ತು ಸಿಬಿಐ ಎನ್‌ಕ್ವೈರಿ ಮುಗಿಯುವವರೆಗೆ ಈ ನಾಲ್ಕೈದು ಜನ ಯಾರು ಇನ್‌ವಾಲ್ವ್ ಇದ್ದಾರೋ ಅವರನ್ನು ಜುಡಿಷಿಯಲ್ ಕಸ್ಟಡಿಯಲ್ಲಿ ತೆಗೆದುಕೊಳ್ಳಬೇಕು. ಅಥವಾ ಯಾವುದೇ ಕಾನೂನಿನ ಕೆಳಗೆ ನಾನ್ ಬೇಲಬಲ್ ಕೆಳಗೆ ಅವರನ್ನು ಅರೆಸ್ಟ್ ಮಾಡಿ ನೀವು ಇಟ್ಟುಕೊಂಡರೆ ವಿಟ್‌ನೆಸ್ ಮೇಲೆ ಅವರ ಪ್ರಭಾವವಾಗುವುದಿಲ್ಲ. ಅಥವಾ ಅವರು ಇನ್‌ಫ್ಲೂಯೆನ್ಸ್ ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ.

ಉಪಾಧ್ಯಕ್ಷರು : ಗೃಹ ಸಚಿವರೇ ತಾವು ಉತ್ತರವನ್ನು ಕೊಡಿ.

ಶ್ರೀ ಸಯದ್ ಜುಲ್ಫೀಕರ್ ಹಷ್ಮಿ : ನನಗೆ ಅವಕಾಶ ಕೊಡಬೇಕು.

ಉಪಾಧ್ಯಕ್ಷರು : ಇಲ್ಲಿ 11 ಜನರ ಹೆಸರು ಇದೆ. ಇಲ್ಲಿ ನಮ್ಮದು ನೋಟೀಸ್ ಇಲ್ಲ. ಅಧ್ಯಕ್ಷರು ಏನು ಪಟ್ಟಿ ಮಾಡಿಕೊಟ್ಟಿದ್ದಾರೆ, ಅದರಲ್ಲಿ ನಿಮ್ಮ ಹೆಸರು ಇಲ್ಲ. ತಮಗೆ ಸಮಯದ ಪ್ರಜ್ಞೆ ಇಲ್ಲ. ಏನೋ ಮಾತನಾಡಲಿಕ್ಕೆ ನಿಂತುಬಿಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ಅವರದು ಅದು ಮತಕ್ಷೇತ್ರ.

(ಗೊಂದಲ)

ಉಪಾಧ್ಯಕ್ಷರು : ತಮಗೆ ನಾನು ವಿನಂತಿ ಮಾಡುತ್ತೇನೆ. ತಾವು ಎರಡು ನಿಮಿಷದಲ್ಲಿ ಮುಗಿಸದಿದ್ದರೆ ತಮಗೆ ಅವಕಾಶ ಇಲ್ಲ. ಎರಡು ನಿಮಿಷದಲ್ಲಿ ಮುಗಿಸಲಿಲ್ಲ ಎಂದರೆ ಇದು ರೆಕಾರ್ಡ್‌ಗೆ ಹೋಗುವುದಿಲ್ಲ. ಇದನ್ನು ನೆನಪು ಇಟ್ಟುಕೊಂಡು ತಾವು ಮಾತನಾಡಿ.

ಶ್ರೀ ಸಯದ್ ಜುಲ್ಫೀಕರ್ ಹಷ್ಮಿ : ಸನ್ಮಾನ್ಯ ಉಪಾಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಡೀಟೈಲ್ ಆಗಿ ಪ್ರಸ್ತಾವನೆಯನ್ನು ಮಾಡಿದ್ದಾರೆ. ತಮ್ಮ ಮೂಲಕ ನಾನು ಇಷ್ಟನ್ನೇ ಸರ್ಕಾರಕ್ಕೆ ಕೇಳಬಯಸುತ್ತೇನೆ. ಇದು ಎಲ್ಲಾ ಪೇಪರ್‌ನಲ್ಲಿ ಬಂದಿದೆ. ವಾರಾಣಾಸಿ ಪೋಲೀಸ್, ಮತ್ತು ಹೈದರಾಬಾದ್ ಪೋಲೀಸ್ ಯಾವ ಜಾಗದಲ್ಲಿ ನೋಟ್ ಮೆಷಿನ್ಸ್ ಇದೆ, ಆ ಜಾಗದಲ್ಲಿ ಲೋಕಲ್ ಪೋಲೀಸರು ಇದ್ದರು, xxx ಅದರ ಸಲುವಾಗಿ ಲೋಕಲ್ ಪೋಲೀಸ್ ಅಲ್ಲಿ ಸಹಕಾರ ಮಾಡುತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಧ್ಯಕ್ಷರೆ, It should not go on record.

(INTERRUPTIONS)

SRI. P.G.R. SCINDIA : Mr. Hashmi this is not correct on your part. How can you say that? what is the Proof you have? How can he accuse a Minister? It cannot go on record.

(ಗೊಂದಲ)

ಉಪಾಧ್ಯಕ್ಷರು : ಸರ್ಕಾರದ ಮಂತ್ರಿ ಇದರಲ್ಲಿ ಇನ್‌ವಾಲ್ವ್ ಆಗಿದ್ದಾರೆ ಎನ್ನುವುದಕ್ಕೆ ನಿಮ್ಮ ಹತ್ತಿರ ಏನು ಆಧಾರ ಇದೆ? ನಿಮ್ಮ ಹತ್ತಿರ ಏನು ಆಧಾರ ಇದೆ ಅದನ್ನು ಕೊಡಿ.

(ಗೊಂದಲ)

ಶ್ರೀ ಪಿ.ಜಿ. ಆರ್. ಸಿಂಧ್ಯಾ : ನಿಮ್ಮ ಹತ್ತಿರ ಏನು ಆಧಾರ ಇದೆ? This cannot go on record.

(ಗೊಂದಲ)

ಉಪಾಧ್ಯಕ್ಷರು : ಆರೋಪ ಮಾಡುವಾಗ ನಿಮ್ಮ ಹತ್ತಿರ ಏನಾದರೂ ಆಧಾರ ಇದ್ದರೆ ಮಾಡಬೇಕು. ಆ ರೀತಿ ಮಾತನಾಡಬಾರದು.

---

xxx ಉಪಾಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನೀವು ಏನು ಬೇಕಾದರೂ ಹೇಳಬಹುದು. ನೀವು ಬಹಳ ದೊಡ್ಡ ಸಾಚಾಗಳು. ಏನು ಬೇಕಾದರೂ ಮಾತನಾಡಿಕೊಳ್ಳಬಹುದು ಎಂತಲೇನು?

ಶ್ರೀ ಸಯದ್ ಜುಲ್ಫೀಕರ್ ಹಷ್ಮಿ : ನನಗೆ ಅವಕಾಶ ಕೊಡಬೇಕು.

ಉಪಾಧ್ಯಕ್ಷರು : ತಮ್ಮ ಹತ್ತಿರ ಅಧಿಕೃತ ಅಲಿಗೇಷನ್ಸ್ ಮಾಡಲಿಕ್ಕೆ ಅಧಿಕೃತ ರೆಕಾರ್ಡ್ ಇರಲಿಲ್ಲ ಎಂದು ಹೇಳಿದರೆ ಹೇಗೆ?

ಶ್ರೀ ಸಯದ್ ಜುಲ್ಫೀಕರ್ ಹಷ್ಮಿ : ನಾನು ಪ್ರೂವ್ ಮಾಡುತ್ತೇನೆ.

ಉಪಾಧ್ಯಕ್ಷರು : ಏನು ಪ್ರೂವ್ ಮಾಡುತ್ತೀರಿ? ತಾವು ಈ ರೀತಿ ಮಾತನಾಡಬಾರದು.

ಶ್ರೀ ಸಯದ್ ಜುಲ್ಫೀಕರ್ ಹಷ್ಮಿ : ಇದರಲ್ಲಿ ರಾಜಕೀಯ ಏನೂ ಇಲ್ಲ. ನಾವು ರಾಜಕೀಯ ಮಾಡುವವರಲ್ಲ.

(ಗೊಂದಲ)

ಉಪಾಧ್ಯಕ್ಷರು : ತಾವು ಯಾರ ಮೇಲಾದರೂ ನಿರ್ದಿಷ್ಟ ಆರೋಪ ಮಾಡಬೇಕಾದರೆ ಮೊದಲು ನೋಟೀಸ್ ಕೊಡಬೇಕು ಇಲ್ಲಿ ನೋಟೀಸ್ ಕೊಟ್ಟು ಮಾತನಾಡಬೇಕು.

ಶ್ರೀ ಸಯದ್ ಜುಲ್ಫೀಕರ್ ಹಷ್ಮಿ : ನಿನ್ನೆ ನಾನು ನೋಟೀಸ್ ಕೊಟ್ಟಿಲ್ಲ.

ಉಪಾಧ್ಯಕ್ಷರು : ಇಲ್ಲಿ ತಮ್ಮದು ನೋಟೀಸ್ ಇಲ್ಲ. ಅಧ್ಯಕ್ಷರು ಲಿಸ್ಟ್ ಮಾಡಿರುವುದರಲ್ಲಿ 11 ಹೆಸರು ಮಾತ್ರ ಇದೆ. ತಮ್ಮ ಹೆಸರು ಇದರಲ್ಲಿ ಇಲ್ಲ.

(ಗೊಂದಲ)

ನಾನು ಸ್ಪಷ್ಟ ಹೇಳುತ್ತೇನೆ. ಇಲ್ಲಿ ತಮ್ಮ ಹೆಸರು ಇಲ್ಲ. ತಾವು ಮಾತನಾಡಬಾರದು. ನೀವು ಮಾತನಾಡಿದರೆ ಇಲ್ಲಿ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಸಯದ್ ಜುಲ್ಫೀಕರ್ ಹಷ್ಮಿ : ಇದು ನನ್ನ ಮತಕ್ಷೇತ್ರಕ್ಕೆ ಸಂಬಂಧಪಟ್ಟಿದ್ದುದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ಒಂದು ಕ್ರಿಯಾಲೋಪ ಇದೆ.

ಶ್ರೀ ಯು.ಆರ್. ಸಭಾಪತಿ : ನಾನು ಸಿಗ್ನೇಟರಿ ಇದ್ದೇನೆ. ನನಗೆ ಅವಕಾಶ ಕೊಡಿ. ಅವರಿಗೆ ಅವಕಾಶ ಕೊಡುವುದಿಲ್ಲ ಎಂದು ಹೇಳಿದರೆ ನನಗೆ ಅವಕಾಶ ಕೊಡಿ. ನಾನು ಸಿಗ್ನೇಚರ್ ಮಾಡಿದ್ದೇನೆ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ಅವರು ಆಡಿರುವ ಮಾತನ್ನು ಕಡತದಿಂದ ತೆಗೆಯುವುದು ಬಿಡುವುದು ತಮಗೆ ಸೇರಿರುವ ವಿಚಾರ.

ಉಪಾಧ್ಯಕ್ಷರು : ನಾನು ಏನು ಹೇಳಿದ್ದೇನೆ, ಇನ್ನು ಎರಡು ಮೂರು ನಿಮಿಷದೊಳಗೆ ನೀವು ಮಾತನಾಡಿ ಮುಗಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಸೌಜನ್ಯವನ್ನು ನಾವು ದುರುಪಯೋಗ ಪಡಿಸಿಕೊಳ್ಳುವುದಿಲ್ಲ. ಆದರೆ ಅವರು ಹೇಳಿರುವುದು ರೆಕಾರ್ಡ್‌ನಲ್ಲಿ ಇರಬಾರದು ಎಂದಿದ್ದರೆ ಅದನ್ನು ತೆಗೆಯುವುದಕ್ಕೆ ನಿಮಗೆ ಅಧಿಕಾರವಿದೆ. ಆದರೆ ಅವರಿಗೆ ಮಾತನಾಡುವುದಕ್ಕೆ ಒಂದು ಅವಕಾಶ ಕೊಡಿ ಸರ್.

ಶ್ರೀ ಸಯದ್ ಜುಲ್ಫೀಕರ್ ಹಷ್ಮಿ : ತಾವು ಮೊದಲು ಮಾತನಾಡಿ ಎಂದು ಹೇಳಿದಿರಿ.

ಉಪಾಧ್ಯಕ್ಷರು : ನಾನು ಏನು ಹೇಳಿದೆ ಎರಡು ನಿಮಿಷ ಮಾತನಾಡಿ ಮುಗಿಸಿ ಎಂದು ಹೇಳಿದ್ದೇನೆ. ಅವರು ಅಲಿಗೇಶನ್ ಮಾಡಬೇಕಾದರೆ ಮೊದಲೇ ನೋಟೀಸ್ ಕೊಡಬೇಕು. ಗೃಹಮಂತ್ರಿಗಳ ಮೇಲೆ ನೇರವಾಗಿ ಆಪಾದನೆ ಮಾಡುವಾಗ ಅವರು ಇಲ್ಲಿ ನೋಟೀಸ್ ಕೊಡದೆ ಆಪಾದನೆ ಮಾಡಿದರೆ ಹೇಗೆ?

ಶ್ರೀ ಪಿ.ಜಿ.ಆರ್. ಸಿಂಧ್ಯ : ನನ್ನ ಮನವಿ ಇಷ್ಟೆ. ಸರ್ಕಾರ ಈ ವಿಚಾರದಲ್ಲಿ ಹಿಂದೆಮುಂದೆ ಯಾವುದನ್ನೂ ಇಟ್ಟುಕೊಂಡಿಲ್ಲ. ಈ ವಿಚಾರ ನಿನ್ನೆ ದಿವಸ ನಮ್ಮ ಗಮನಕ್ಕೆ ಬಂದ ತಕ್ಷಣವೇ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಸಿಬಿಐಗೆ ರೆಫರ ಮಾಡಬೇಕಾಗಿತ್ತು ಏಕೆಂದರೆ ಇದರಲ್ಲಿ ಇಂಟರ್‌ಸ್ಟೇಟ್ ಜಾಲ ಇರುವುದರಿಂದ ನಾವು ತತ್ವಶಃ ಒಪ್ಪಿಕೊಂಡಿದ್ದೇವೆ. ನಮ್ಮ ಶಾಸಕರು, ಮಂತ್ರಿಗಳು ಮತ್ತು ಪಕ್ಷದವರನ್ನು ರಕ್ಷಣೆ ಮಾಡಬೇಕೆಂಬ ಉದ್ದೇಶ ಇದ್ದಿದ್ದರೆ ನಾವು ಮಾಡುತ್ತಿರಲಿಲ್ಲ. ಈಗ ಏನಾಗುತ್ತದೆ ಎಂದರೆ ಮಾನ್ಯ ಖರ್ಗೆಯವರು ಸರ್ಕಾರವನ್ನು ನಡೆಸಿರುವವರು, ಮುಂದೆ ಸರ್ಕಾರವನ್ನು ನಡೆಸತಕ್ಕಂಥವರು. ಮಂತ್ರಿಗಳ ಬಗ್ಗೆ ಜನಗಳ ಮುಂದೆ ಈ ರೀತಿ ಮಾತಾಡಿದರೆ ಏನಾಗುತ್ತದೆ ಎಂಬುದನ್ನು ದಯವಿಟ್ಟು ಯೋಚನೆ ಮಾಡಬೇಕು. ತಾವು ಇಲ್ಲಿ ನಮ್ಮನ್ನು ಏನು ಬೇಕಾದರೂ ಹಿಯಾಳಿಸಿ ಮಾತನಾಡಬಹುದು ಎಂದು ಭಾವಿಸಬೇಡಿ. No. no. It is not like that. What is the message the people get? ಆದ್ದರಿಂದ ಮಂತ್ರಿಗಳು ನಿಜವಾಗಿಯೂ ತಪ್ಪು ಮಾಡಿದ್ದರೆ ಆ ಬಗ್ಗೆ ತಾವು ಮಾತನಾಡಿ. ಇದು ಸರ್ಕಾರದ ಗೌರವದ ಪ್ರಶ್ನೆ ಹಾಗೂ ನಮ್ಮ ವೈಯಕ್ತಿಕ ಮಾನ ಮರ್ಯಾದೆಯ ಪ್ರಶ್ನೆಯಾಗಿರುತ್ತದೆ. ನಾವು ಮಂತ್ರಿಗಳಾದ ತಕ್ಷಣ ಎಲ್ಲವನ್ನೂ ಬಿಟ್ಟುಬಂದು ಇಲ್ಲಿ ಕುಳಿತಿಲ್ಲ. ನಾವೂ ಸಹ ಚುನಾವಣೆಯಲ್ಲಿ ಗೆದ್ದು ಬಂದಿರತಕ್ಕಂಥವರು. ನಮ್ಮ ಮತಕ್ಷೇತ್ರದಲ್ಲಿ, ಪರಿಚಯಸ್ಥರಲ್ಲಿ ಹಾಗೂ ಸಾಮಾನ್ಯವಾದ ಜನಗಳಲ್ಲಿ ನಮ್ಮ ಬಗ್ಗೆ ಸರ್ಕಾರದ ಬಗ್ಗೆ ನಮ್ಮ ನಾಯಕರ ಬಗ್ಗೆ ಏನು ಅಭಿಪ್ರಾಯ ಬರುತ್ತದೆ? ಆದ್ದರಿಂದ ತಾವು ಆಪಾದನೆ ಮಾಡಬೇಡಿ ಎಂದು ಹೇಳುವುದಿಲ್ಲ. ಆಪಾದನೆ ಮಾಡುವುದಕ್ಕೆ ಸಭೆಯ ನಿಯಮಾವಳಿಗಳ ಪ್ರಕಾರವಾಗಿ ಮಂತ್ರಿ, ಮುಖ್ಯಮಂತ್ರಿಗಳ ಮೇಲೆ ತಮ್ಮ ಏನೇ ಆಪಾದನೆ ಇದ್ದರೂ ಸಹ ತಾವು ಅಧ್ಯಕ್ಷರಿಗೆ ಬರೆದುಕೊಡಿ. ಅವರು ಅವಕಾಶ ಕೊಡಲಿ, ತಾವು ಆಪಾದನೆ ಮಾಡಿ. ತಾವು ಹೊಸದಾಗಿ ಗೆದ್ದು ಬಂದಿರುವುದರಿಂದ ನಾನು ತಮಗೆ ಒಂದ ಸಲಹೆ ಕೊಡುತ್ತಿದ್ದೇನೆ, ನಿಮಗೆ ಆ ರೀತಿಯ ಉದ್ದೇಶ ಯಾರ ಬಗ್ಗೆಯೂ ಇಲ್ಲದಿದ್ದರೂ ಆವೇಶದಲ್ಲಿ ಏನೋ ಹೇಳುವುದಕ್ಕೆ ಹೋಗಿ ಏನೋ ಮಾಡುವುದಕ್ಕೆ ಹೊರಟಿದ್ದೀರಿ. ಆದ್ದರಿಂದ,

ನಾನು ಅತ್ಯಂತ ಕಳಕಳಿಯ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ, ಈ ರೀತಿ ಮಂತ್ರಿಗಳ ಬಗ್ಗೆ ಆಪಾದನೆ ಮಾಡುವಾಗ ತಾವು ಸ್ವಲ್ಪ ವಿಚಾರ ಮಾಡಬೇಕು.

ಶ್ರೀ ಸಯದ್ ಜುಲ್ಫೀಕರ್ ಹಶ್ಮಿ : ತಾವು ಹೇಳಿದಿರಲ್ಲಾ ಸರ್, ಎಷ್ಟು ಜನ ಮಂತ್ರಿಗಳು ಇನ್ನೋಸೆಂಟ್ ಜನರ ಮೇಲೆ ಫೋನ್‌ಕಾಲ್ ಆಧಾರದ ಮೇಲೆ ಪ್ರತಿಯೊಂದು ಜಿಲ್ಲೆಗಳಲ್ಲಿ ಫಾಲ್ಸ್ ಕೇಸ್ ಹಾಕಿಸಿದ್ದಾರೆ ಎಂಬ ಬಗ್ಗೆ ತಾವು ಹೇಳಬೇಕು.

ಉಪಾಧ್ಯಕ್ಷರು : ತಾವು ಈ ವಿಷಯದ ಬಗ್ಗೆ ಮಾತನಾಡಿ.

ಶ್ರೀ ಸಯದ್ ಜುಲ್ಫೀಕರ್ ಹಷ್ಮಿ : ಉಪಾಧ್ಯಕ್ಷರೆ ಅವರು ಸಿಬಿಐಗೆ ಬರೆಯಿರಿ ಎಂದು ಹೇಳುತ್ತಿದ್ದಾರೆ ಸಿಬಿಐ ಎನ್‌ಕ್ವೈರಿಗೆ ಲೋಕಲ್ ಅಡ್ಮಿನಿಸ್ಟ್ರೇಷನ್‌ನವರು ಸಹಕಾರ ಮಾಡುವುದಿಲ್ಲ. ಆದ್ದರಿಂದ ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ, ಮೊದಲು ಅಲ್ಲಿ ಪೋಲೀಸ್ ಅಧಿಕಾರಿಗಳು ಮತ್ತು ಲೋಕಲ್ ಅಡ್ಮಿನಿಸ್ಟ್ರೇಶನ್ಸ್ ಯಾರಿದ್ದಾರೆ ಅವರನ್ನು ಮೊದಲು ಜ್ಯುಡಿಷಿಯಲ್ ಕಸ್ಟಡಿಗೆ ತೆಗೆದುಕೊಳ್ಳಿ. ಆದರ ಮೇಲೆ ತಾವು ಎನ್‌ಕ್ವೈರಿ ಮಾಡಿ. ಆಗ ಸತ್ಯ ಹೊರಬರುತ್ತದೆ. ಈಗಾಗಲೇ ಸುಮಾರು ಒಂದೂವರೆ ತಿಂಗಳಾಗಿದೆ. ನೀವು ಯಾವ ಅಧಿಕಾರಿ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಇವತ್ತು ಏನಾಗಿದೆ ಎಂದರೆ ಯಾರು ಪೇಪರ್‌ನಲ್ಲಿ ಪಬ್ಲಿಕ್ ಮೀಟಿಂಗ್‌ನಲ್ಲಿ ಪೋಲೀಸ್ ಇನ್ವಾಲ್ವ್ ಆಗಿದ್ದಾರೆ ಎಂದು ಸ್ಟೇಟ್‌ಮೆಂಟ್ ಕೊಡುತ್ತಿದ್ದಾರೆ ಅವರನ್ನು ಪೋಲೀಸರು ಹಿಡಿದು ಹೊಡೆಯುತ್ತಿದ್ದಾರೆ, ಕೇಸ್ ಹಾಕುತ್ತಿದ್ದಾರೆ. ಏಕೆ ನಮಗೆ ವಿರುದ್ಧವಾಗಿ ಸ್ಟೇಟ್‌ಮೆಂಟ್ ಕೊಡುತ್ತಿದ್ದೀರಿ? ಈ ರೀತಿ ಹೇಳಿದರೆ ನಿಮ್ಮನ್ನು ಹಿಡಿದು ಒಳಗೆ ಹಾಕುತ್ತೇವೆ ಎಂದು ಪೋಲೀಸರು ಬೆದರಿಕೆ ಹಾಕುತ್ತಿದ್ದಾರೆ. ಅದಕ್ಕೋಸ್ಕರ ನಾನು ತಮಗೆ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು : ಆಯಿತು ಕುಳಿತುಕೊಳ್ಳಿ. ಈಗ ಗೃಹಮಂತ್ರಿಗಳು ಉತ್ತರ ಕೊಡುತ್ತಾರೆ.

+ ಶ್ರೀ ರೋಷನ್‌ಬೇಗ್ (ಗೃಹ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಈ ವಿಷಯ ಇಲ್ಲಿ ಪ್ರಸ್ತಾಪವಾದಾಗ ನಾನು ಆ ಮನೆಯಲ್ಲಿದ್ದೆ. ಅಲ್ಲಿ 330ನೇ ನಿಯಮದ ಅಡಿಯಲ್ಲಿ ಒಂದು ಪ್ರಶ್ನೆ ಇತ್ತು. ಇಲ್ಲಿಗೆ ಬರಬೇಕೆಂದು ಸೂಚನೆ ಬಂದ ತಕ್ಷಣ ಇಲ್ಲಿಗೆ ಬಂದಿದ್ದೇನೆ. ಈಗಾಗಲೇ ಹಿರಿಯ ಸದಸ್ಯರಾದ ಮಾನ್ಯ ಯಡಿಯೂರಪ್ಪನವರು ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರಾದ ಮಾನ್ಯ ಖರ್ಗೆ ಸಾಹೇಬರು ಮಾತನಾಡಿದ್ದಾರೆ. ನಿನ್ನೆ ಆ ಸದನದಲ್ಲಿ ಈ ವಿಷಯ ಪ್ರಸ್ತಾಪವಾದಾಗ ನಾನು ಒಂದು ಸ್ಟೇಟ್‌ಮೆಂಟ್ ಓದಿದೆ. ಈ ಘಟನೆಯಲ್ಲಿ ಒಬ್ಬ ಪ್ರಧಾನ ಆರೋಪಿ ಯಾರಿದ್ದಾರೆ ಅವನು ಮಾಜಿ ಜಿಲ್ಲಾ ಪರಿಷತ್ ಅಧ್ಯಕ್ಷ ಕಾಲೇಕರ್ ಎಂಬಾತನಾಗಿದ್ದು ಈ ಹಿಂದೆ ಆತ ಜನತಾದಳ ಪಕ್ಷದ ಮೆಂಬರ್ ಮತ್ತು ಅಲ್ಲಿನ ಮಾಜಿ ಜಿಲ್ಲಾ ಪರಿಷತ್ ಸದಸ್ಯ, ಹಾಗೂ ಜಿಲ್ಲಾ ಪರಿಷತ್ ಅಧ್ಯಕ್ಷನಾಗಿದ್ದನು. ಅದಕ್ಕಾಗಿ ಸದಸ್ಯರು ಏನು ಹೇಳಿದರು ಎಂದರೆ ಈ ವಿಚಾರದಲ್ಲಿ ಈ ಸರ್ಕಾರದ ಕೈವಾಡ ಇದೆ, ಸರ್ಕಾರ ಅವರಿಗೆ ರಕ್ಷಣೆ ಕೊಡುತ್ತಿದೆ ಎಂದು. ಆದರೆ ಸರ್ಕಾರದಿಂದ ಯಾರಿಗೂ ರಕ್ಷಣೆ ಕೊಡುವುದಕ್ಕೆ ನಮಗೆ ಇಷ್ಟವಿಲ್ಲ. I want to make it very clear. ಇದು ಇಂಟರ್‌ಸ್ಟೇಟ್

ರ್ಯಾಮಿಫಿಕೇಷನ್ ಕೇಸ್ ಆಗಿರುವುದರಿಂದ ಈ ಕೇಸ್ ನಮ್ಮ ಗಮನಕ್ಕೆ ಬಂದ ಮೇಲೆ ಅವರಲ್ಲಿ ಕೆಲವರನ್ನು ಅರೆಸ್ಟ್ ಮಾಡಿದೆವು. ಒಬ್ಬ ತಾನಾಗಿಯೇ ಬಂದು ಸರೆಂಡರ್ ಆಗಿದ್ದಾನೆ. ಯಾರು ಯಾರು ಅಬ್‌ಸ್ಕ್ಯಾಂಡಿಂಗ್ ಆಗಿದ್ದಾರೆ ಅವರಲ್ಲಿ ಕೆಲವರು ಬೆಂಗಳೂರಿನವರೂ ಇದ್ದಾರೆ. ಕೆಲವರು ಗೌರಿಬಿದನೂರು ತಾಲ್ಲೂಕಿನವರಿದ್ದಾರೆ ಹಾಗೂ ಕೆಲವರು ತುಮಕೂರಿನವರಿದ್ದಾರೆ, ಕೆಲವರು ಬೆಂಗಳೂರು ರೂರಲ್‌ನವರಿದ್ದಾರೆ. ಅವರ ಹೆಸರುಗಳನ್ನು ಬೇಕಾದರೆ ನಾನು ಓದುತ್ತೇನೆ. ಇದು ಕೇವಲ ಬೀದರ್‌ನಲ್ಲಿ ಅಥವಾ ನಾಸಿಕ್‌ನಲ್ಲಿ ಕೋಟಾ ನೋಟ್ ಪ್ರಿಂಟ್ ಆಯಿತು ಎಂದು ಹೇಳುವುದಕ್ಕಾಗುವುದಿಲ್ಲ ಅಲ್ಲಿ ಆಂಧ್ರ ಪೋಲೀಸ್ ಮತ್ತು ಮಹಾರಾಷ್ಟ್ರ ಪೋಲೀಸರು ಬಂದು ತನಿಖೆ ಮಾಡುತ್ತಿದ್ದಾರೆ. ಆಂಧ್ರ ಪ್ರದೇಶದ ಹಿಂದೂಪುರದಲ್ಲಿ 13 ಜನರು ಅರೆಸ್ಟ್ ಆಗಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದುವರೆಗೆ ಯಾರ್ಯಾರು ಅರೆಸ್ಟ್ ಆಗಿದ್ದಾರೆ.

ಶ್ರೀ ಆರ್. ರೋಷನ್‌ಬೇಗ್ : ಅದನ್ನು ಹೇಳುತ್ತೇನೆ. ನಾಸಿಕ್ ಪೋಲೀಸ್‌ನವರು ಅರೆಸ್ಟ್ ಮಾಡಿರುವ ಜನರ ಪಟ್ಟಿ ಈ ರೀತಿ ಇದೆ :

1. ಸಂಜೀವ್ ಬಿನ್ ಸಕ್ರಾಂ ಗಾಯಕ್‌ವಾಡ್ ರೆಸಿಡೆಂಟ್ ಪೋರಚಂಡ್ರಿ ಊರು, ಬಸವಕಲ್ಯಾಣ ತಾಲ್ಲೂಕು
2. ರೆಹಮಾನ್ ಬಿನ್ ಹುಸೇನಿ ಕಾಂಬ್ಳೆ, ಖಾನಾಪುರ, ಬಸವಕಲ್ಯಾಣ ತಾಲ್ಲೂಕು
3. ಶಂಕರ್ ಬಿನ್ ಲಾಲಪ್ಪ ರೆಸಿಡೆಂಟ್ ಸಸ್ತಾಪುರ್ ಬಸವಕಲ್ಯಾಣ.
4. ಈಶ್ವರ್ ಬಿನ್ ಗೋವಿಂದ್ ಬಿರಾದಾರ್ ರಾಜೇಶ್ವರ, ಬಸವಕಲ್ಯಾಣ ತಾಲ್ಲೂಕು
5. ಕಾಳಿದಾಸ್ ಬಿನ್ ರುಕ್ಮಂಜು ಪನ್ನಾಂಪಲ್ಲಿ, ಗೊಲಿವಾಡಿ ಊರು, ಬಸವಕಲ್ಯಾಣ.
6. ಮಾರ್ಕಸ್ ಬಿನ್. ವೈದ್ಯನಾಥ್ ಉಪಾಧ್ಯಾಯ, ಮಂಗಲವಾಡಿ, ಬೀದರ್.

ಅನಂತಪುರ ಪೋಲೀಸರು 13 ಜನರನ್ನು ಹಿಂದೂಪುರ ಪೋಲೀಸ್ ಸ್ಟೇಷನ್ ಕ್ರೈಂ ನಂಬರ್ 28:97ನಲ್ಲಿ ಅಂಡರ್ ಸೆಕ್ಷನ್ 48:9ನಲ್ಲಿ ಇಷ್ಟು ಜನರನ್ನು ಅರೆಸ್ಟ್ ಮಾಡಿದ್ದಾರೆ.

1. ಎಂ.ವಿ. ರವಿಚಂದ್ರಾಚಾರಿ ಬಿನ್. ವೆಂಕಟಸುಬ್ಬಾಚಾರಿ, ಮಂಚನಹಳ್ಳಿ ಗ್ರಾಮ, ಗೌರಿಬಿದನೂರು ತಾಲ್ಲೂಕು. ಕೋಲಾರ ಜಿಲ್ಲೆ.
2. ಎಂ. ರಾಮಕೃಷ್ಣಬಾಬು ಬಿನ್. ನಂಜುಂಡಪ್ಪ, ಪ್ಯಾಲೆಸ್ ಗುಟ್ಟಹಳ್ಳಿ, ಬೆಂಗಳೂರು.
3. ಸಿ.ಕೆ. ಪಾರ್ವತಿ ಕೆ.ಜಿ. ಚಂದ್ರಶೇಖರ್, ರೆಸಿಡೆಂಟ್ ಆಫ್ ಮಂಜುನಾಥ್ ನಗರ, ಬೆಂಗಳೂರು.
4. ಸಯಬಾನ್ ಬಿನ್. ಲೂಬಿಯ, ಅಂಡ್‌ವಾಡ ವಿಲೇಜ್, ಅಕ್ಕಲಕೋಟೆ ತಾಲ್ಲೂಕು, ಸೋಲಾಪುರ ಜಿಲ್ಲೆ.

5. ರತ್ನಯ್ಯಗೌಡ ಬಿನ್. ವೀರಣ್ಣ. ಮಂಚೆನಹಳ್ಳಿ, ಗೌರಿಬಿದನೂರು ತಾಲ್ಲೂಕು.

6. ಬಿ.ಎ. ರಾಧಾಕೃಷ್ಣಶೆಟ್ಟಿ ಹಿಂದೂಪುರ, ರೆಸಿಡೆಂಟ್ ಆಫ್ ಸತ್ಯನಾರಾಯಣ ಪೇಟೆ.

7. ಬಿ. ನಾಗರಾಜಗುಪ್ತ ಬಿನ್ ಲಕ್ಷ್ಮೀನಾರಾಯಣ ಶೆಟ್ಟಿ. ಗೂಡ್ರುಪಾಳ್ಯ ವಿಲೇಜ್ ಗೌರಿಬಿದನೂರು ತಾಲ್ಲೂಕು.

8. ಮಹಮದ್ ಬಿನ್. ಕಲಂದರ್ ಭಾಷಾ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ.

9. ಸರ್ದಾರ್ ಬಿನ್ ಎಸ್.ಕೆ. ಭಾಷಾ, ಕನಕಪುರ ತಾಲ್ಲೂಕು ಬೆಂಗಳೂರು ಗ್ರಾಮಾಂತರ ಜಿಲ್ಲೆ.

10. ರಮೇಶ್ ಬಿನ್ ಈಶ್ವರ್, ಹುಮನಾಬಾದ್ ತಾಲ್ಲೂಕ್, ಬೀದರ್ ಜಿಲ್ಲೆ.

11. ಹರಿಜನ್ ಸಂಜಯ್ ಬಿನ್ ಶಂಕರಪ್ಪ, ಮುನಿಯಾತಲಂ, ಬೀದರ್ ಜಿಲ್ಲೆ.

12. ಬಿ. ಗುಂಡಪ್ಪ ಬಿನ್ ಸಹಬಣ್ಣ, ಪಗಡಾಲ ಗ್ರಾಮ, ಬೀದರ್ ಜಿಲ್ಲೆ.

13. ವಸಂತಮ್ಮ ಪುಟ್ಟಸ್ವಾಮಿ, ಮಂಜುನಾಥ ನಗರ, ಬೆಂಗಳೂರು.

ಇವರನ್ನೆಲ್ಲಾ ರೈಡ್ ಮಾಡಿ ಅರೆಸ್ಟ್ ಮಾಡಿದ ಮೇಲೆ ಆಂಧ್ರ ಪೋಲೀಸರು ಸುಮಾರು 55.5 ಲಕ್ಷ ರೂಪಾಯಿಗಳ ಫೇಕ್ ಕರೆನ್ಸಿ ನೋಟ್‌ಗಳು ಇದರ ಜೊತೆಗೆ Semi-burnt remains of the currency ಎಂಬುದನ್ನು ಗುಡ್ಡಪ್ಪ, ಮಗಡಲ್ ವಿಲೇಜ್‌ನಿಂದ ಸೀಜ್ ಮಾಡಲಾಗಿದೆ. 5ನೇ ತಾರೀಖು ಇನ್ನೂ ಒಂದು ಆಫ್ ಸೆಟ್ ಪ್ರಿಂಟಿಂಗ್ ಮೆಷಿನ್, ಅದರ ಜೊತೆಗೆ ನಂಬರಿಂಗ್ ಪ್ಲೇಟ್ಸ್, equipment ಇವೆಲ್ಲಾ ಬೀದರ್‌ನ ಬಾವಿಯೊಂದರಲ್ಲಿ ಸಿಕ್ಕಿವೆ. ಮತ್ತೊಂದು ಸೆವೆನ್ ಗ್ರಾಫೈಟ್ ಬ್ಲಾಕ್ಸ್, 12 ಲಿಥೋ ನೆಗಟೀವ್ಸ್‌ನ 100 ರೂಪಾಯಿ ಕರೆನ್ಸಿ ನೋಟುಗಳು ಇವೆಲ್ಲಾ ಅವರ ಹತ್ತಿರ ಸಿಕ್ಕಿವೆ. ಈ ಬಗ್ಗೆ ತನಿಖೆ ಮುಂದುವರೆಯುತ್ತಿದೆ. ಇದನ್ನು ಏತಕ್ಕೆ ಸಿ.ಓ.ಡಿಗೆ ಮೊದಲೇ ರೆಫರ್ ಮಾಡಿದ್ದೇವೆ ಎಂದರೆ ಇದರಲ್ಲಿ ಇಂಟರ್‌ಸ್ಟೇಟ್ ರ‍್ಯಾಮಿಫಿಕೇಷನ್ ಇದೆ ಎಂಬ ಕಾರಣಕ್ಕಾಗಿ ಸಿ.ಓ.ಡಿ.ಗೆ ರೆಫರ್ ಮಾಡಿದ್ದೇವೆ. ಸರ್ಕಾರ ಅವರಿಗೆ ಶೀಲ್ಡ್ ಮಾಡುತ್ತಿದ್ದಾರೆ, ಇದನ್ನು ಸಿಬಿಐಗೆ ಏಕೆ ರೆಫರ್ ಮಾಡಬಾರದು ಎಂಬ ಒಂದು ಸಲಹೆ ಬಂದಾಗ for a second, we did not hesitate. ಇಮೀಡಿಯೆಟ್ ಆಗಿ ಆಯಿತು, ನಾವು ಅನೌನ್ಸ್ ಮಾಡುತ್ತೇವೆ, ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿ ಎಂದು ಹೇಳಿ ನಿನ್ನೆಯೇ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿ ಆಯಿತು ಇಮೀಡಿಯೆಟ್ ಆಗಿ ಇದನ್ನು ರೆಫರ್ ಮಾಡೋಣ ಎಂದು ಹೇಳಿದ್ದಾರೆ. ಇವತ್ತು ನಾವು ಹೋಮ್ ಸೆಕ್ರೆಟರಿಯವರನ್ನು ಮೀಟ್ ಮಾಡುತ್ತಿದ್ದೇವೆ. ಮೊದಲು ಒಂದು ಪತ್ರವನ್ನು ಭಾರತ ಸರ್ಕಾರಕ್ಕೆ ನಾವು ಕಳಿಸಬೇಕಾಗುತ್ತದೆ. This case we want to refer it to you. Kindly take it up. ಎಂದು ಭಾರತ ಸರ್ಕಾರಕ್ಕೆ ಪತ್ರ ಬರೆಯಲು ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ನಾವೇನು ಅಂದುಕೊಂಡೆ ಅಂದರೆ ಅಸೆಂಬ್ಲಿಯಲ್ಲಿ ಹಿರಿಯ ಸದಸ್ಯರು, ವಿರೋಧ ಪಕ್ಷದ ನಾಯಕರೆಲ್ಲ ಸರ್ಕಾರದ ಈ ಗೆಸ್ಚರ್‌ಗೆ

ಪ್ರಿಸಿಯೇಟ್ ಮಾಡುತ್ತಾರೆ, ಸರ್ಕಾರ ಒಳ್ಳೆಯ ಕೆಲಸ ಮಾಡಿದೆ ಎಂದು ಹೇಳುತ್ತಾರೆ. ಇಮೀಡಿಯಟ್ ಗೆ ನೋಟೀಸ್ ಬಂದ ತಕ್ಷಣ ಸಿಬಿಐಗೆ ರೆಫರ್ ಮಾಡಿದ್ದಾರೆ ಎಂದು ತಿಳಿದಿದ್ದೆ. ಆಮೇಲೆ ಕೆಲವು ಲಿಗೇಷನ್ಸ್ ಇದೆ. ನಾನು ಒಪ್ಪುತ್ತೇನೆ. ಮಾನ್ಯ ಖರ್ಗೆಯವರು ಹೇಳಿದರು. ಅವನು ಬಂದು ಸರೆಂಡರ್ ಗಬೇಕಾಗಿತ್ತು, ಪೋಲೀಸ್‌ನವರಿಗೆ ಗೊತ್ತಿರಲಿಲ್ಲವೇ? ಅವರು ಹೇಳಿದ್ದು ನಿಜ, ನಾನು ಒಪ್ಪುತ್ತೇನೆ. ದಕ್ಕೆ ಸರ್ಕಾರ ಈ ಕೇಸನ್ನು ಸಿಬಿಐಗೆ ರೆಫರ್ ಮಾಡುತ್ತಿದೆ. ಅದನ್ನೂ ಇನ್‌ವೆಸ್ಟಿಗೇಷನ್ ಮಾಡುತ್ತಾರೆ. ಂಕೆ ಲೋಕಲ್ ಪೋಲೀಸ್ ಸುಮ್ಮನೇ ಇದ್ದರು? ಏಕೆ ನಾಸಿಕ್ ಪೋಲೀಸ್‌ನವರು ನಾಸಿಕ್‌ನಿಂದ ಎಂದು ಪತ್ತೆ ಹಚ್ಚಿದ ಮೇಲೆಯೇ ಗೊತ್ತಾಗಿದ್ದಾ? ಅದಕ್ಕಿಂತ ಮುಂಚೆ ಇವರಿಗೆ ಗೊತ್ತಾಗಲಿಲ್ಲವಾ? ಮೇಲೆ ಇನ್ನೊಂದು ಕಡೆ ಏನು ಹೇಳುತ್ತಿದ್ದಾರೆ? ಅಲ್ಲಿ ರ್ಯೂಮರ್ ನಡೆಯುತ್ತಿತ್ತು. ಈ ತರಹ ರೋಟಾ ನೋಟ್ ನಡೆಯುತ್ತಿದೆ ಎಂದು ಈ ತರಹ ರ್ಯೂಮರ್ಸ್ ಇದ್ದರೂ ಸಹ ಏಕೆ ಪೋಲೀಸ್ ಧಿಕಾರಿಗಳಿಗೆ ಜಿಲ್ಲಾಧಿಕಾರಿಗಳಿಗೆ ಅದು ಗಮನಕ್ಕೆ ಬರಲಿಲ್ಲ ಎಂದು ಹೇಳುವುದು ಕೂಡ ನಮ್ಮ ಗಮನಕ್ಕೆ ಬಂದಿದೆ. ನಾವು ಸಿಬಿಐಗೆ ರೆಫರ್ ಮಾಡುತ್ತಿದ್ದೇವೆ. ಆಪೊಸಿಷನ್ ಲೀಡರ್ಸ್ ಅವರು ಈ ಸ್ಟರ್ ಆಫ್ ದಿ ಗವರ್ನ್‌ಮೆಂಟಿಗೆ ತಾವು ಅಪ್ರಿಷಿಯೇಟ್ ಮಾಡಬೇಕು. We are referring to CBI. Once again I want to make it clear that we are not shielding anybody. ಸ್ವಲ್ಪ ನಮಗೆ ಆ ತರಹ ಏನಾದರೂ ವಿಚಾರ ಇದ್ದಿದ್ದರೆ ನಾವು ಸಿಬಿಐಗೆ ರೆಫರ್ ಮಾಡುತ್ತಿರಲಿಲ್ಲ. This is a clear case. We have referred to the CBI. There is nothing to hide.

ಶ್ರೀ ಸಯದ್ ಜುಲ್ಫೀಕರ್ ಹಷ್ಮಿ: ಲೋಕಲ್ ಪೋಲೀಸ್ ಅಧಿಕಾರಿ ಸುಮ್ಮನೇ ಕುಳಿತಿದ್ದರು. ವರ ಮೇಲೇ ನೀವು ಏನು ಕ್ರಮ ತೆಗೆದುಕೊಂಡಿರಿ? ನಿಮಗೆ ಗೊತ್ತಿದೆ. ಯಾರ್ಯಾರು ಪೋಲೀಸರು ಇದ್ದಾರೆ ಎಂದು, ಮೊದಲು ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

ವ. ಕನ್ನಡ ಜಿಲ್ಲೆಯ ಉಳ್ಳಾಲ, ಸೋಮೇಶ್ವರ, ವಿಟ್ಲದಲ್ಲಿ ಮುಂತಾದ ಅಭಿವೃದ್ಧಿ ಕಾಮಗಾರಿಯಿಂದ ವಂಚಿತವಾಗಿರುವುದು.

+ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಪ್ರಸ್ತುತ ಸುಮಾರು 7 ಕಡೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂರು ಕಡೆ ಗ್ರಾಮಗಳು ಅಧಿಸೂಚಿತ ಪ್ರದೇಶವೆಂದು ಕೆಳಿದ ಐದಾರು ವರ್ಷಗಳಿಂದ ಯಾವುದೇ ಸ್ಥಳೀಯ ಆಡಳಿತದಲ್ಲಿ ಸೇರದೆ ನೆನೆಗುದಿಗೆ ಬಿದ್ದಿದೆ. ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲದಲ್ಲಿ ಸೋಮೇಶ್ವರ, ವಿಟ್ಲ್‌ದಲ್ಲಿ ಪುದು, ಮತ್ತು ಕುಂದಾಪುರದಲ್ಲಿ ಗಂಗೊಳ್ಳಿ ಗ್ರಾಮ ಪಂಚಾಯತಿಗಳು ಅಧಿಸೂಚಿತ ಪ್ರದೇಶವಾಗಿ ಯಾವುದೇ ಅಭಿವೃದ್ಧಿ ಕಾಮಗಾರಿಗಳಿಂದ ವಂಚಿತವಾಗಿವೆ. ಕೇವಲ ಒಂದು ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಸರ್ಕಾರ ಇದನ್ನು ನಗರ ಪಂಚಾಯತಿ ಮಾಡದೇ, ಗ್ರಾಮ ಪಂಚಾಯತಿ ಮಾಡದೇ ಯಾವುದೇ ಅಧಿಕಾರವನ್ನು ಕೊಡದೇ ಅಭಿವೃದ್ಧಿ ಕಾಮಗಾರಿಯಿಂದ ವಂಚಿತವಾದ್ದರಿಂದ ಆ ಕ್ಷೇತ್ರದಲ್ಲಿ ವಿಶೇಷವಾಗಿ ಸೋಮೇಶ್ವರ ಗ್ರಾಮದಲ್ಲಿ ರೇಶನ್ ಕಾರ್ಡ್ ಸಿಗುವಂತಹದು, ಮನೆ ನಂಬರ್ ಕೊಡುವ ಬಗ್ಗೆ ಅಥವಾ ರಸ್ತೆ, ಕುಡಿಯುವ ನೀರಿನಲ್ಲಿ ಬಹಳಷ್ಟು ತೊಂದರೆ ಆಗಿದೆ. ಉಳ್ಳಾಲ ಟೌನ್ ಪಂಚಾಯತಿಯ